ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.   ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 149 | Saturday 26-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-


## ಸಂಕ್ಷಿಪ್ತ ವಾರ್ತೆ

### ಸಂಡೂರು ವಿಧಾನಸಭಾ ಚುನಾವಣೆ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ನಾಮಪತ್ರ ಸಲ್ಲಿಕೆ



● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ 25 :** ಜಿಲ್ಲೆಯ ಸಂಡೂರು ತಾಲೂಕಿನ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಇಂದು ನೂರಾರು ಬೆಂಬಲಿಗರೊಂದಿಗೆ ಮೆರವಣಿಗೆ ಮೂಲಕ ತಹಸೀಲ್ದಾರ್ ಕಚೇರಿಗೆ ಹೋಗಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ನಾಮಪತ್ರವನ್ನು ಸಲ್ಲಿಸಿದರು.
ಬಿಜೆಪಿಯ ರಾಜ್ಯಾಧ್ಯಕ್ಷರಾದ ವಿಜಯೇಂದ್ರ, ಮಾಜಿ ಸಚಿವರಾದ ಬಿ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ಇವರೊಂದಿಗೆ ಪಟ್ಟಣದ ಮುಖ್ಯ ಬೀದಿಯಲ್ಲಿ ಭಾರಿ ಮೆರವಣಿಗೆ ಮೂಲಕ ತಾಲೂಕ ಕಚೇರಿಗೆ ತೆರಳಿ ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಿದರು.
ಈ ಮಧ್ಯೆ ದಾರಿ ಉದ್ದಕ್ಕೂ ಅವರ ಅಭಿಮಾನಿಗಳು ಬಾರಿ ಗಾತ್ರದ ಹೂವಿನ ಹಾರಗಳನ್ನು ಹಾಕಿ ಪುಷ್ಪ ಮಳೆಗೆರೆದು ಅಭಿಮಾನವನ್ನು ಮೆರೆದರು.
ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಜೆಪಿಯ ಸುಮಾರು 50,000ಕ್ಕೂ ಅಧಿಕ ಮತದಾರರಿದ್ದು ಈ ಸಾರಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಗೆಲುವು ಸಾಧಿಸಲಿದ್ದಾರೆ ಎಂದು ರಾಜ್ಯಧ್ಯಕ್ಷ ವಿಜಯೇಂದ್ರ ವಿಶ್ವಾಸವನ್ನು ವ್ಯಕ್ತಪಡಿಸಿದರು.

### ಇಂದು ಗವಿಸಿದ್ದೇಶ್ವರ ಮಠದಲ್ಲಿ ಲಿಂಗೈಕ್ಯ ಶ್ರೀ ಲಿಂಗೇಶ್ವರ ಮಾಹಾಸ್ವಾಮಿಗಳ ಸಂಸ್ಮರಣೋತ್ಸವ

● ವಾರ್ತಾಲೋಕ ವಾರ್ತೆ



**ಹೂವಿನಹಡಗಲಿ ಅ. 25:** ಪಟ್ಟಣದ ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಸಂಸ್ಥಾನ ಶಾಖಾ ಮಠದಲ್ಲಿ ಲಿಂಗೈಕ್ಯ ಶ್ರೀ. ಮ.ನಿ.ಪ್ರ. ಲಿಂಗೇಶ್ವರ ಮಹಾಸ್ವಾಮಿಗಳರವರ 22ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಹಾಗೂ 196ನೇ ಮಾಸಿಕ ಶಿವಾನುಭವ ಕಾರ್ಯಕ್ರಮ ಇಂದು ಬೆಳಿಗ್ಗೆ 10 ಗಂಟೆಗೆ ಜರುಗುವುದು. ಬೆಳಿಗ್ಗೆ 5 ಗಂಟೆಗೆ ಪೂಜ್ಯ ಲಿಂಗೇಶ್ವರ ಮಾಹಾಸ್ವಾಮಿಗಳ ಕರ್ತೃ ಗದ್ದುಗೆಗಳಿಗೆ ರುದ್ರಾಭಿಷೇಕ ಪೂಜೆಯೊಂದಿಗೆ ಸಂಸ್ಮರಣೋತ್ಸವ ಪ್ರಾರಂಭವಾಗುತ್ತದೆ. ಧರ್ಮ ಚಿಂತನಾ ಸಮಾರಂಭದ ಪಾವನ ಸಾನ್ನಿಧ್ಯವನ್ನು ಜಗದ್ಗುರು ಅಭಿನವ ಗವಿಸಿದ್ದೇಶ್ವರ ಮಾಹಾಸ್ವಾಮಿಗಳು ಗವಿಮಠ ಕೊಪ್ಪಳ. ಸಾನ್ನಿಧ್ಯವನ್ನು ಲಿಂಗನಾಯಕನಹಳ್ಳಿಯ ಚನ್ನವೀರ ಮಹಾಸ್ವಾಮಿಗಳು. ಮೈನಳ್ಳಿಯ ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು. ನಂದಿ ಪುರದ ಡಾ. ಮಹೇಶ್ವರ ಮಾಹಾಸ್ವಾಮಿಗಳು. ಹಡಗಲಿ ಗವಿಸಿದ್ದೇಶ್ವರ ಮಠದ ಡಾ. ಹಿರಿಶಾಂತವೀರ ಮಹಾಸ್ವಾಮಿಗಳು ವಹಿಸಲಿದ್ದಾರೆ. ರಂಗಭಾರತಿ ಕಾರ್ಯಾಧ್ಯಕ್ಷೆ ಶ್ರೀಮತಿ ಸುಮಾ ವಿಜಯಕುಮಾರ ಉದ್ಘಾಟನೆ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಕೃಷ್ಣನಾಯ್ಕ ವಹಿಸಲಿದ್ದು. ಮಾಜಿ ಶಾಸಕ ಟಿ ಪರಮೇಶ್ವರ್ ನಾಯ್ಕ, ಮಾಜಿ ಶಾಸಕರಾದ ನಂದಿಹಳ್ಳಿ ಹಾಲಪ್ಪ, ಬಿ. ಚಂದ್ರನಾಯ್ಕ, ನಿವೃತ್ತ ಅಭಿಯಂತರರಾದ ಓದೋ ಗಂಗಪ್ಪ, ವಿರಶೈವ ಲಿಂಗಾಯತ ತಾಲೂಕು ಘಟಕದ ಅಧ್ಯಕ್ಷರಾದ ಸಿ ಕೆ ಎಂ ಬಸವಲಿಂಗಸ್ವಾಮಿ. ನಗರ ಘಟಕದ ಅಧ್ಯಕ್ಷರಾದ ಮುಂಡವಾಡ ಉಮೇಶ. ಹೊಳೆ ಹಡಗಲಿಯ ಶ್ರೀಮತಿ ನಿರ್ಮಲ ಹಿರೇಮಠ, ಪುರಸಭೆ ಸದಸ್ಯರಾದ ಶ್ರೀಮತಿ ಲೀಲಾವತಿ ಅಟವಾಳಗಿ.ಶ್ರೀ ಕೆ ಹನುಮಂತ, ಶ್ರೀ ಎ.ಜೆ ವೀರೇಶ.ಸೇರಿದಂತೆ ಇತರರಿದ್ದರು ಭಾಗವಹಿಸಲಿದ್ದಾರೆ.ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ಶ್ರೀ ಟಿ. ವೆಂಕಟೇಶ್ವರ ಇವರಿಗೆ 2024ನೇ ಸಾಲಿನ ಶ್ರೀ ಲಿಂಗೇಶ್ವರ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಕಾರ್ಯಕ್ರಮಕ್ಕೆ ಶ್ರೀ ಗವಿಸಿದ್ದೇಶ್ವರ ಮಠದ ಭಕ್ತರು ಭಾಗವಹಿಸಲು ಕೋರಲಾಗಿದೆ.



**ಕುರುಗೋಡು ಸಮೀಪದ ಕುಡುತಿನಿ ಪಟ್ಟಣದಲ್ಲಿ ಭೂಸಂತ್ರಸ್ಥರು ಕೈಗಾರಿಕೆಸ್ಥಾಪನೆಗಾಗಿ ಕಡಿಮೆಬೆಲೆಯಲ್ಲಿ ರೈತರ ಜಮೀನುಗಳನ್ನು ಕೈಗಾರಿಕೆಮಾಲಿಕರು ವಶಪಡಿಸಿಕೊಂಡಿರುವ ಭೂಮಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ, ಇಲ್ಲವೇ ರೈತರಜಮೀನುಗಳನ್ನು ವಾಪಾಸ್‌ಮಾಡಿ ಎಂಬ ತಮ್ಮ ನ್ಯಾಯಯೋಚಿತ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನಡೆಸುವ ಅನಿರ್ಧಿಷ್ಟಾವಧಿ ಧರಿಣಿ ಇಂದು 678 ನೇ ದಿನಕ್ಕೆ ಕಾಲಿಟ್ಟಿದೆ. ಧರಿಣಿಯಲ್ಲಿ ಭೂಮಿ ಕಳೆದುಕೊಂಡ ಕೊಳಗಲ್ಲು, ಕುಡುತಿನಿ, ವೇಣಿವಿರಾಪುರ, ಏಳುಬೆಂಚಿ, ಸಿದ್ದಮ್ಮನಹಳ್ಳಿ, ಹರಿಗಿನಡೋಣಿ ಸೇರಿದಂತೆ ಇತರೆ ಗ್ರಾಮಗಳ ಭೂಸಂತ್ರಸ್ಥರು, ವಿವಿದ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು, ರೈತರು ಇದ್ದರು.**

# ಉಪಸಮರಕ್ಕೆ ಅಖಾಡ ಸಜ್ಜು

● ವಾರ್ತಾಲೋಕ ವಾರ್ತೆ

**ಬೆಂಗಳೂರು ಅ.25 :** ರಾಜ್ಯದಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಕಣ ರಂಗೇರಿರುವಾಗಲೇ ನಾಮಪತ್ರ ಸಲ್ಲಿಕೆಯ ಭರಾಟೆ ಬಿರುಸಾಗಿದ್ದು, ಈ ಉಪಚುನಾವಣೆಯಲ್ಲಿ ಕುಟುಂಬ ರಾಜಕಾರಣವೇ ಮೇಳೈಸಿದೆ.
ಎರಡು ಕುಟುಂಬಗಳ ಮೂರನೇ ತಲೆಮಾರಿನ ಕುಡಿಗಳ ರಾಜಕೀಯ ಪ್ರವೇಶಕ್ಕೆ ಅಖಾಡ ಸಜ್ಜಾಗಿದೆ.
ರಾಜ್ಯದಚನ್ನಪಟ್ಟಣ,ಶಿಗ್ಗಾವಿಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನವೆಂಬರ್ 13 ರಂದು ನಡೆಯಲಿದ್ದು, ಈ ಮೂರು ಕ್ಷೇತ್ರಗಳಲ್ಲೂಕುಟುಂಬ ರಾಜಕಾರಣ ಪ್ರಾಧಾನ್ಯತೆ ಪಡೆದಿದೆ.
ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬದ ಮೂರನೇ ತಲೆಮಾರಿನ ಕುಡಿಯಾದ ನಿಖಿಲ್‌ಕುಮಾರಸ್ವಾಮಿ ಹಾಗೂ ಶಿಗ್ಗಾವಿಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿಕುಟುಂಬದ ಮೂರನೇ ತಲೆಮಾರಿನ ಕುಡಿ ಭರತ್ ಬೊಮ್ಮಾಯಿರವರ ರಾಜಕೀಯ ಅಗ್ನಿ ಪರೀಕ್ಷೆಗೂ ಈ ಉಪಸಮರ ಸಾಕ್ಷಿಯಾಗಲಿದೆ.
ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಬಸವರಾಜ ಬೊಮ್ಮಾಯಿಯವರಿಗೆ ಈ ಚುನಾವಣೆಗಳು ಪ್ರತಿಷ್ಠೆಯಾಗಿದ್ದು, ತಮ್ಮ ವಂಶದ ಕುಡಿಗಳನ್ನು ಚುನಾವಣೆಯಲ್ಲಿ ಗೆಲ್ಲಿಸಿಕೊಂಡುಕುಟುಂಬರಾಜಕೀಯ ಪರಂಪರೆಯನ್ನು ಮುಂದುವರಿಸುವ ಉಮೇದಿನಲ್ಲಿದ್ದು, ಇಬ್ಬರು ಮಾಜಿ ಮುಖ್ಯಮಂತ್ರಿಗಳ ಪುತ್ರರ ರಾಜಕೀಯ ಹಣೆಬರಹ ಏನಾಗಲಿದೆ ಎಂಬುದು ಕುತೂಹಲ ಮೂಡಿಸಿದೆ.
ಸಂಡೂರಿನಲ್ಲೂ ಕುಟುಂಬ ರಾಜಕಾರಣ ಮೇಳೈಸಿದ್ದು, ಇಲ್ಲಿ ಸಂಸದ ತುಕರಾಮ್‌ರವರಪತ್ನಿಅನ್ನಪೂರ್ಣ ಕೈ ಅಭ್ಯರ್ಥಿಯಾಗಿದ್ದು, ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕೆ ಅವರು ಇಳಿದಿದ್ದಾರೆ.



ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳ ಕುಟುಂಬ ಸದಸ್ಯರು ರಾಜಕಾರಣ ಪ್ರವೇಶ ಇದೇ ಮೊದಲೇನಲ್ಲ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು,ಗುಂಡೂರಾವ್, ರಾಮಕೃಷ್ಣಹೆಗಡೆ, ವೀರೇಂದ್ರ ಪಾಟೀಲ್, ಎಸ್. ಬಂಗಾರಪ್ಪ, ಹೆಚ್.ಡಿ. ದೇವೇಗೌಡ, ಜೆ.ಹೆಚ್. ಪಟೇಲ್, ಧರ್ಮಸಿಂಗ್, ಹೆಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪ, ಸಿದ್ದರಾಮಯ್ಯ ಸೇರಿದಂತೆ ಹಲವು ಮಾಜಿ ಮುಖ್ಯಮಂತ್ರಿಗಳ ಕುಟುಂಬದ ಕುಡಿಗಳು ರಾಜಕೀಯ ಪ್ರವೇಶ ಮಾಡಿ ಸೋಲು ಗೆಲುವನ್ನು ಕಂಡಿದ್ದಾರೆ.
ಈ ಉಪಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ,ಮಾಜಿಮುಖ್ಯಮಂತ್ರಿ ಬಸವರಾಜಬೊಮ್ಮಾಯಿಅವರಪುತ್ರ ಭರತ್ ಬೊಮ್ಮಾಯಿರವರು ತಮ್ಮ ಕುಟುಂಬದ ರಾಜಕೀಯ ಪರಂಪರೆ ಅಸ್ತಿತ್ವ ಮುಂದುವರಿಕೆಗೆ ಹೋರಾಟ ನಡೆಸಲು ಸನ್ನದ್ಧರಾಗಿದ್ದಾರೆ.
ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಣಕ್ಕಿಳಿದಿರುವ ನಿಖಿಲ್ ಕುಮಾರಸ್ವಾಮಿಯವರಿಗೆ ಇದು ಮೂರನೇ ಚುನಾವಣೆಯಾಗಿದೆ. ಈ ಮೊದಲು ಅವರು 2019ರಲ್ಲಿ ಮಂಡ್ಯ ಲೋಕಸಭಾಕ್ಷೇತ್ರದಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. 2023ರ ಚುನಾವಣೆಯಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ನಿಖಿಲ್ ಕುಮಾರಸ್ವಾಮಿ ಅಲ್ಲೂ ಸೋಲನುಭವಿಸಿದ್ದು.ಈಗಮೂರನೇ ಬಾರಿಗೆ ಚನ್ನಪಟ್ಟಣದಿಂದ ಅದೃಷ್ಟ ಪರೀಕ್ಷೆಗೆ ಅವರು ಇಳಿದಿದ್ದಾರೆ.
ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿರವರಿಗೆ ಇದೇ ಮೊದಲ ಚುನಾವಣೆಯಾಗಿದ್ದು, ಮೊದಲ ಚುನಾವಣೆಯಲ್ಲಿ ಅವರು ಯಶಸ್ವಿಯಾಗುತ್ತಾರೆಯೇಎಂಬುದು ಕುತೂಹಲ ಮೂಡಿಸಿದೆ. ಸಂಡೂರು ಕ್ಷೇತ್ರದಲ್ಲಿ ಸಂಸದ ತುಕರಾಮ್‌ರವರ ಪತ್ನಿ ಅನ್ನಪೂರ್ಣರವರಿಗೆ ಕೈ ಟಿಕೆಟ್ ನೀಡಲಾಗಿದ್ದು, ಅವರ ಗೆಲುವು ತುಕರಾಮ್‌ರವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ.
ಈ ಉಪಚುನಾವಣೆಯ ಪಕ್ಷಗಳ ಹೋರಾಟಕ್ಕಿಂತ ಕುಟುಂಬಗಳ ನಡುವಿನಕಾದಾಟಕ್ಕೆವೇದಿಕೆಯಾಗಿದೆ.

**ನಾಮಪತ್ರ ಸಲ್ಲಿಕೆ ಭರಾಟೆ**

ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು.
ಚನ್ನಪಟ್ಟಣಕ್ಷೇತ್ರದಿಂದಮಾಜಿಪ್ರಧಾನಿ ದೇವೇಗೌಡರ ಮೊಮ್ಮಗ ಹಾಗೂ ಕೇಂದ್ರಸಚಿವಕುಮಾರಸ್ವಾಮಿಯವರ ಪುತ್ರನಿಖಿಲ್‌ಕುಮಾರಸ್ವಾಮಿ,ಶಿಗ್ಗಾವಿ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿರವರಪುತ್ರ ಭರತ್ ಬೊಮ್ಮಾಯಿ, ಹಾಗೆಯೇ ಶಿಗ್ಗಾವಿಯಲ್ಲಿ ಕೈ ಅಭ್ಯರ್ಥಿ ಯಾಸಿನ್ ಅಹ್ಮದ್ ಖಾನ್ ಪಠಾಣ್, ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಬಂಗಾರು ಹನುಮಂತು ತಮ್ಮ ಉಮೇದುವಾರಿಕೆ ಸಲ್ಲಿಸಿದರು.

## "ಕನ್ನಡ ಭಾಷೆ ನೆಲ ಜಲ ಕುರಿತು ಅರಿವು"





● ವಾರ್ತಾಲೋಕ ವಾರ್ತೆ

**ಕೊಟ್ಟೂರು: ಅ25 :** ಕನ್ನಡ ಭಾಷೆ, ನೆಲ, ಜಲ ಕುರಿತು ಅರಿವು ಮೂಡಿಸಲು ಬೆಂಗಳೂರಿನಿಂದ ಬೀದರ್ ವರೆಗೂ ಸ್ಕೂಟರಿನಲ್ಲಿ ಹೊರಟಿರುವ ಜ್ಯೂನಿಯರ್ ವಿಷ್ಣುವರ್ದನ್ ಎಂದೇ ಹೆಸರು ಮಾಡಿರುವ, ವಿಷ್ಣುವರ್ಧನ್ ಅಪ್ಪಟ ಅಭಿಮಾನಿ ನಾಗಬಸಯ್ಯ ಮಲ್ಲಯ್ಯ ಮಳಲಿಮಠ ಅವರು ಕಾನಹೊಸಹಳ್ಳಿ, ನಿಂಬಳಗೆರೆ,ಗಾಣಗಟ್ಟೆ , ಉಜ್ಜಯಿನಿ ಹಾಗೂ ಕೊಟ್ಟೂರು ಪಟ್ಟಣಕ್ಕೆ ಭೇಟಿ ನೀಡಿದರು.
ಈ ವೇಳೆ ಗ್ರಾಮದ ಮುಖಂಡರು ಹಾಗೂ ವಿಷ್ಣು ಅಭಿಮಾನ ಬಳಗದ ಸದಸ್ಯರು ಅವರನ್ನು ಸ್ವಾಗತಿಸಿ, ಸನ್ಮಾನಿಸಿ ಬಿಳ್ಕೊಟ್ಟರು.
ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕನ್ನಡ ನಾಡು ನುಡಿ ಸಂಸ್ಕೃತಿ ಕುರಿತು ಅರಿವು ಮೂಡಿಸುವ ಕೆಲಸ ಮಾಡುತ್ತಿರುವೆ. ನನ್ನ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡುತ್ತಿದ್ದಾರೆ. ವಿಷ್ಣು ಅಭಿಮಾನಿಯಾಗಿ ನನ್ನ ಕರ್ತವ್ಯವನ್ನು ನಾನು ಮಾಡುತ್ತಿರುವೆ ಎಂದರು.
ಇವರು ಬಂದ ಸಂದರ್ಭದಲ್ಲಿ ವಿಷ್ಣು ಅಭಿಮಾನಿಗಳು ಸೇರಿ ಅನೇಕರು ಶುಭ ಹಾರೈಸಿ ಬೀಳ್ಕೊಟ್ಟರು.
ರಾಣೇಬೆನ್ನೂರು ತಾಲ್ಲೂಕಿನ ಐರಣಿ ಗ್ರಾಮದವರಾದ ನಾಗಬಸಯ್ಯ ಹತ್ತು ವರ್ಷಗಳಿಂದ ಪ್ರತಿ ಅಕ್ಟೋಬರಲ್ಲಿ ತಮ್ಮ ದ್ವಿಚಕ್ರ ವಾಹನದ ಮೂಲಕ ನಾಡಿದ್ಯಂತ ಸಂಚರಿಸುವ ಅವರು, ಕನ್ನಡ ಭಾಷೆ, ನೆಲ, ಜಲ ಸಂರಕ್ಷಣೆ ಮಾಡುವ ಕುರಿತು ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ.
ಸದ್ಯ ಬೆಂಗಳೂರಿನಲ್ಲಿ ಖಾಸಗಿ ನೌಕರಿಯಲ್ಲಿರುವ ನಾಗಬಸಯ್ಯ ಅವರು ತಮ್ಮದೇ ಆಕ್ಟೀವಾ 3ಜಿ ಸ್ಕೂಟರ್ನ್ನು ಕನ್ನಡ ಬಾವುಟ, ತೋರಣಗಳಿಂದ ಸಿಂಗರಿಸಿ, ಭುವನೇಶ್ವರಿ ಮತ್ತು ವಿಷ್ಣು ಚಿತ್ರಗಳನ್ನು ಅಳವಡಿಸಿಕೊಂಡು ಕನ್ನಡ ರಥವನ್ನಾಗಿಸಿಕೊಂಡಿದ್ದಾರೆ. ವಿಷ್ಣು ಅವರ ವೇಷ ಭೂಷಣ ತೊಟ್ಟು ಆಕರ್ಷಿಸುತ್ತಾರೆ. ವಿಷ್ಣು ಅಭಿಮಾನಿಗಿರುವ ಇವರು ಅನೇಕ ಕಡೆ ಜ್ಯೂ.ವಿಷ್ಣುವಾಗಿ ಕಾರ್ಯಕ್ರಮಗಳನ್ನು ನೀಡಿ ಅದರಿಂದ ಬಂದ ಹಣವನ್ನು ಇಂತಹ ಜಾಗೃತಿಗಾಗಿ ಬಳಕೆ ಮಾಡುತ್ತಿದ್ದಾರೆ. ಈ ರೀತಿ ಸಂಚಾರ ಕೈಗೊಂಡಾಗ ಅನೇಕ ನಗರ ಪಟ್ಟಣಗಳಲ್ಲಿ ಪೊಲೀಸರು ಅವರ ವಾಹನಕ್ಕೆ ಪೆಟ್ರೋಲ್ ಖರ್ಚು ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅನೇಕ ವಿಷ್ಣುವರ್ಧನ್ ಅಭಿಮಾನಿಗಳು ಎಲ್ಲಾ ಗ್ರಾಮಗಳಿಂದ ಸ್ವಾಗತವನ್ನು ಮಾಡಿದರು.
ಗಡ್ಡೇರ ರವಿಕುಮಾರ, ನಾಗರಾಜ, ಮಂಜುನಾಥ, ಉಜ್ಜಯಿನಿ ರವಿಕುಮಾರ ಗ್ರಾಮ ಪಂಚಾಯತಿ ಸದಸ್ಯರು, ಪ್ರಕಾಶ, ನೀರಗಂಟಿ ಮಾರಪ್ಪ, ಕೊಟ್ಟೂರು ರುದ್ರೇಶ್, ಮಲ್ಲಿಕಾರ್ಜುನ, ವಿಷ್ಣುವರ್ಧನ್ ಅರಕ್ಷಕರು, ರಮೇಶ್ ಕಾನಹೊಸಹಳ್ಳಿ ಅನೇಕ ಅಭಿಮಾನಿಗಳು ಜೊತೆಗೂಡಿ ಮುಂದಿನ ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸಿದರು.

**ವರದಿ ಪರಶುರಾಮ್.**

## ಹೊಸಪೇಟೆ: ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಲಂಚಾವತಾರ ಲೋಕಾಯುಕ್ತರಿಗೆ ದೂರು

● ವಾರ್ತಾಲೋಕ ವಾರ್ತೆ

**ಹೊಸಪೇಟೆ: ಅ 25:** ವಿಜಯನಗರ ಜಿಲ್ಲೆ ಹೊಸಪೇಟೆಯ ನಗರದ ಶುಕ್ರವಾರದಂದು ಭಗತ್ ಸಿಂಗ್ ರಕ್ತದಾನಿಗಳ ಸಂಘದ ಹೋರಾಟಕ್ಕೆ ಜೀವ ತುಂಬಿದ ಕರ್ನಾಟಕ ಲೋಕಾಯುಕ್ತರು.
ಹೊಸಪೇಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಭ್ರಷ್ಟಾಚಾರದ ಪ್ರಕರಣದ ವಿಚಾರಣೆ ನಡೆಸುತ್ತಿರುವ ಕರ್ನಾಟಕ ಲೋಕಾಯುಕ್ತರಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದರು
ಕಳೆದ ವರ್ಷ 2023 ಸೆಪ್ಟೆಂಬರ್ ನಲ್ಲಿ ಹೊಸಪೇಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ ವಿರುದ್ಧ ಭಗತ್ ಸಿಂಗ್ ರಕ್ತದಾನಿಗಳ ಸಂಘದ ನೇತೃತ್ವದಲ್ಲಿ ವಿವಿಧ ಸಂಘ–ಸಂಸ್ಥೆಗಳು – ನಗರಸಭಾ ಸದಸ್ಯರುಗಳು – ಸಾರ್ವಜನಿಕರು ಹಾಗೂ ಬಾಣಂತಿ ತಾಯಿಯ ಕುಟುಂಬಸ್ಥರು ಹೋರಾಟ ನಡೆಸಿ ಹೊಸಪೇಟೆಯ ವಿಭಾಗೀಯ ಮಟ್ಟದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ / ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮತ್ತು ವಿಜಯನಗರ ಜಿಲ್ಲೆಯ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಕರ್ತವ್ಯದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಹಣಕ್ಕೋಸ್ಕರ ಹೆರಿಗೆ ಮಾಡುತ್ತಿರುವ ಸರ್ಕಾರಿ ಕರ್ತವ್ಯನಿರತ ವೈದ್ಯರ / ಸಿಬ್ಬಂದಿಗಳ ವಿರುದ್ಧ ಹಾಗೂ ಪ್ರಸೂತಿ ಮತ್ತು ಪ್ರಸೂತಿ ನಂತರದ ಚಿಕಿತ್ಸೆಗೆಂದು ಬಂದ ಸಂದರ್ಭದಲ್ಲಿ ನಿರ್ಲಕ್ಷ ತೋರುತ್ತಿರುವ ಮತ್ತು ಬಾಣಂತಿ ತಾಯಂದಿರು ಮತ್ತು ಕುಟುಂಬದ ಸದಸ್ಯರ ಹತ್ತಿರ ಹಣ ಕಿತ್ತಿ ತಿನ್ನುತ್ತಿರುವ ಕೆಲ ವೈದ್ಯರು ಹಾಗೂ ಸಿಬ್ಬಂದಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಹೋರಾಟ ನಡೆಸಿದ ನಂತರ ಸ್ಥಳೀಯ ಶಾಸಕರು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಭಗತ್ ಸಿಂಗ್ ರಕ್ತಧಾನಿಗಳ ಸಂಘದ ಅಧ್ಯಕ್ಷರು ಹಾಗೂ ಬಾಣಂತಿ ತಾಯಿಯ ಸಂಬಂಧಿಕರ ಜೊತೆ ಸಭೆ ನಡೆಸಿದರು ಸಹ ಯಾವುದೇ ಪ್ರಯೋಜನವಾಗಲಿಲ್ಲ ಎನ್ನುವುದು ತಮಗೆಲ್ಲರಿಗೂ ಗೊತ್ತಿರೋ ವಿಚಾರ.
ಈ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಿದ ಭಗತ್ ಸಿಂಗ್ ರಕ್ತದಾನಿಗಳ ಸಂಘದ ಅಧ್ಯಕ್ಷರಾದ ಕೆ.ಎಂ. ಸಂತೋಷ್ ಕುಮಾರ್ ರವರು ಬಾಣಂತಿಯ ಕುಟುಂಬಸ್ಥರು ಹಾಗೂ ರಕ್ತದಾನಿಗಳ ಸಂಘದ ಸದಸ್ಯರಾದ ಸುನಿಲ್ ನಾಯಕ್ ರವರೊಂದಿಗೆ ಚರ್ಚಿಸಿ ಕರ್ನಾಟಕ ರಾಜ್ಯದ ಲೋಕಾಯುಕ್ತರಿಗೆ ವಿಜಯನಗರ ಜಿಲ್ಲೆ ಹೊಸಪೇಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಭ್ರಷ್ಟಾಚಾರದ ವಿರುದ್ಧ ದಾಖಲೆಗಳ ಸಮೇತ ಲಿಖಿತ ದೂರು ಸಲ್ಲಿಸಲಾಯಿತು.




ಸುಮಾರು ಒಂದು ವರ್ಷಗಳ ನಂತರ ನೇರವಾಗಿ ಕರ್ನಾಟಕದ ಮಾನ್ಯ ಉಪ ಲೋಕಾಯುಕ್ತರು ನ್ಯಾಯಮೂರ್ತಿ ಸನ್ಮಾನ್ಯ ಶ್ರೀ ಃ. ವೀರಪ್ಪ ಸಾಹೇಬರು ಪ್ರಕರಣ ದಾಖಲಿಸಿಕೊಂಡು ದಿನಾಂಕ 24/10/2024 ರಂದು ವೈದ್ಯರು ಹಾಗೂ ಸುನಿಲ್ ನಾಯಕ್ ರವರನ್ನು ನೇರವಾಗಿ ತಮ್ಮ ಸಮ್ಮುಖದಲ್ಲೇ ವಿಚಾರಣೆಗೆ ಒಳಪಡಿಸಿದ್ದಾರೆ.
ಈ ಸಂದರ್ಭದಲ್ಲಿ ನ್ಯಾಯವಾದಿಗಳು ಮತ್ತು ( ಂಐಐಗ ) ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ನ ಮುಖಂಡರು ಹಾಗೂ ಡಿವೈಎಫ್‌ಐ ನ ಮಾಜಿ ರಾಜ್ಯ ಉಪಾಧ್ಯಕ್ಷರು ಹಾಗೂ ಭಗತ್ ಸಿಂಗ್ ರಕ್ತಧಾನಿಗಳ ಸಂಘದ ಕಾರ್ಯದರ್ಶಿಗಳಾದ ಸಂಗಾತಿ ಬಿಸಾಟಿ. ಮಹೇಶ್ ಹಾಗೂ ಭಗತ್ ಸಿಂಗ್ ರಕ್ತಧಾನಿಗಳ ಸಂಘದ ಅಧ್ಯಕ್ಷರಾದ ಕೆ.ಎಂ.ಸಂತೋಷ್ ಕುಮಾರ್ ಜೊತೆ ಸಂಜಯ್ , ಕೆ.ಶಾಂತಕುಮಾರ್ ಅವರು ಜೊತೆಯಲ್ಲಿದ್ದರೂ ಪ್ರಕರಣದ ಮುಂದಿನ ವಿಚಾರಣೆ 28/11/2024 ರಂದು ಮುಂದುವರೆಯಲಿದೆ ನಮ್ಮ ರಾಜಿರಹಿತ ಹೋರಾಟ ಮುಂದುವರೆಯಲಿದೆ ಎಂದು ಕೆ.ಎಂ.ಸಂತೋಷ್ ಕುಮಾರ್ ಅಧ್ಯಕ್ಷರು ಭಗತ್ ಸಿಂಗ್ ರಕ್ತಧಾನಿಗಳ ಸಂಘ ಪತ್ರಿಕೆ ಪ್ರಕಟಣೆ ತಿಳಿಸಿದರು.

**ವರದಿ ಅಂಬರೀಶ್ ನಾಯಕ್.**

# ಪ್ರತಿನಿತ್ಯ ದಾನ ಧರ್ಮ ಮಾಡಿರಿ ಚಳಗೇರಾ ಶ್ರೀಗಳು

**ಇಳಕಲ್ :** ಪ್ರತಿದಿನವೂ ದಾನ ಧರ್ಮ ಮಾಡುವ ಸದ್ಭಾವನೆ ಎಲ್ಲರಲ್ಲೂ ಬರಬೇಕೆಂದು ಚಳಗೇರಿಯ ಪೂಜ್ಯ ವೀರ ಸಂಗಮೇಶ್ವರ ಶಿವಾಚಾರ್ಯರು ಹೇಳಿದರು.

ಬಸವ ನಗರದ ಗಣೇಶ ಗುಡಿಯಲ್ಲಿ ಕುಷ್ಟಗಿ ತಾಲೂಕಿನ ಚಳಗೇರಿ ಗ್ರಾಮದ ಹಿರೇಮಠದ ಈ ನಾಡು ಕಂಡ ನಡೆದಾಡುವ ದೇವರಾದ ಪೂಜ್ಯಲಿಂ. ವಿರುಪಾಕ್ಷಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಸ್ಮರಣೆಯ ದಶಮಾನೋತ್ಸವದ ಧರ್ಮ ಸಭೆ ಹಾಗೂ ಧರ್ಮ ಜನಜಾಗೃತಿ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ವೀರಸಂಗಮೇಶ್ವರ ಶ್ರೀಗಳು ಆಶೀರ್ವಚನ ನೀಡುತ್ತಾ ಜಗತ್ತಿನ ಕಲ್ಯಾಣಕ್ಕಾಗಿ ಧರ್ಮ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದ್ದೇವೆ ಇದು 47ನೇ ಜಾಗೃತಿ ಕಾರ್ಯಕ್ರಮವಾಗಿದೆ ಎಂದರು.




ಸನಾತನ ಭವ್ಯ ಪರಂಪರೆಯನ್ನು ಕೈ ಬಿಡಬೇಡಿ ನಿಮ್ಮ ಮಕ್ಕಳ ಭವಿಷ್ಯ ಉಜ್ವಲಕ್ಕೆ ಲಿಂಗ, ರುದ್ರಾಕ್ಷಿ, ವಿಭೂತಿಯನ್ನು ಹಚ್ಚುವಂತೆ ಪ್ರೇರೆಪಿಸಿರಿ, ಇದರಲ್ಲಿ ವೈಜ್ಞಾನಿಕ ಸತ್ಯ ಅಡಗಿದೆ, ಗುರುವಿನ ಕೃಪೆ ಎಲ್ಲರ ಮೇಲೆ ಇರಬೇಕೆಂದು ಚಳಗೇರಾ ಶ್ರೀಗಳು ಹೇಳಿದರು.

ವಿಶೇಷ ಉಪನ್ಯಾಸಕರಾಗಿ ಕಮತಗಿಯ ಗಣೇಶ ಶಾಸ್ತ್ರಿ ಮಾತನಾಡುತ್ತಾ ಅಪಾರ ಭಕ್ತರ ಸಂಕುಲವನ್ನು ಲಿಂ.ವಿರುಪಾಕ್ಷಲಿಂಗ ಶ್ರೀಗಳು ಹೊಂದಿದ್ದರು ಎಂದು ಪೂಜ್ಯರ ಪವಾಡಗಳನ್ನು ಕುರಿತು ಮಾತನಾಡಿದರು ಜಿ. ಆರ್. ಕೋಟಿ, ಜಗದೀಶ ಗಿರಡ್ಡಿ, ಡಾ. ಚಂದ್ರು ಕಂಬಳಿ ಮೊದಲಾದವರು ಮಾತನಾಡಿದರು.

ಸಾನಿಧ್ಯ ವಹಿಸಿದ್ದ ದೋಟಿಹಾಳ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಸಂಸ್ಕೃತಿ–ಸಂಸ್ಕಾರ ಭಾರತದಲ್ಲಿ ಮಾತ್ರ ಇದೆ ಅದನ್ನು ಕಲಿಯಲು ವಿದೇಶದವರು ಭಾರತಕ್ಕೆ ಬರುತ್ತಾರೆ ಎನ್ನುತ್ತಾ ಧರ್ಮವನ್ನು ಬೆಳಗಿಸುವ ಕಾರ್ಯವನ್ನು ಚಳಗೇ–ರಿಯ ಪೂಜ್ಯ ವೀರ ಸಂಗಮೇಶ್ವರ ಶಿವಾಚಾರ್ಯರು 21ನೇ ಶತಮಾನದಲ್ಲಿ ಮಾಡುತ್ತಿದ್ದಾರೆ ಎಂದರು.

ಶ್ರೀ ಸಿದ್ಧಿ ವಿನಾಯಕ ಸೇವಾ ಸಮಿತಿಯ ಅಧ್ಯಕ್ಷ ಶರಣು ಸರಗಣಾಚಾರಿ, ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ, ಇಳಕಲ್ ಅರ್ಬನ್ ಬ್ಯಾಂಕ್ ನಿರ್ದೇಶಕ ಮಲ್ಲಿಕಾರ್ಜುನ ಅಗ್ನಿ, ಬಾಗಲಕೋಟೆ ಜಿ.ಪಂ. ಮಾಜಿ ಅಧ್ಯಕ್ಷ ಹನುಮಂತಪ್ಪ ರಾಠೋಡ, ಬಸವರಾಜ ರೇವಡಿ ಮೊದಲಾದವರು ವೇದಿಕೆಯಲ್ಲಿದ್ದರು.

ವೀರೇಶ ಯಡ್ರಾಮಿ ಪ್ರಾರ್ಥಿಸಿದರು. ವಿಜಯಕುಮಾರ ಹಿರೇಮಠ ಮತ್ತು ಸಂಗಡಿಗರಿಂದ ವೇದ ಘೋಷ, ಪ್ರಾಧ್ಯಾಪಕ ಬಿ.ಸಿ. ತುಂಬಗಿ ಸ್ವಾಗತಿಸಿದರು, ಪ್ರಾಚಾರ್ಯ ಎಸ್. ವ್ಹಿ. ಕಂಬಿ ನಿರೂಪಿಸಿದರು, ಡಾ. ಎಸ್. ಹೆಚ್. ಅಂಗಡಿ ವಂದಿಸಿದರು.

## 6ನೇ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ

# 'ಜಾನುವಾರುಗಳಿಗೆ ಕಾಲುಬಾಯಿ ರೋಗಲಸಿಕೆ ಹಾಕಿಸಿ ರೋಗಮುಕ್ತಗೊಳಿಸಬೇಕು'–ಹೆಗ್ಗನಾಯಿಕ



**ಮೂಡಲಗಿ :** 'ಜಾನುವಾರುಗಳಿಗೆ ಕಾಲುಬಾಯಿ ರೋಗವನ್ನು ನಿಯಂತ್ರಣ ಮಾಡಲು ಪ್ರತಿ ಆರು ತಿಂಗಳಿಗೊಮ್ಮೆ ಲಸಿಕೆ ಹಾಕಿಸಬೇಕು. ಉಚಿತವಾಗಿ ಎಲ್ಲ ದನ ಕರುಗಳಿಗೆ ನೀಡಲಾಗುತ್ತಿದ್ದು ರೈತರು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಬೆಳಗಾವಿಯ ಜಿಲ್ಲಾ ಪಂಚಾಯತ ಆಡಳಿತ ಉಪಕಾರ್ಯದರ್ಶಿ ಬಸವರಾಜ ಹೆಗ್ಗನಾಯಿಕ ಹೇಳಿದರು,

ಇಲ್ಲಿಯ ಶ್ರೀ ಶಿವಬೋಧರಂಗ ಮಠದ ಗೋವು ಶಾಲೆಯಲ್ಲಿ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಕರ್ನಾಟಕ ಸಹಕಾರಿ ಹಾಲು ಉತ್ಪಾದರಕ ಮಹಾಮಂಡಳ ಸಹಯೋಗದಲ್ಲಿ ರಾಷ್ಟ್ರೀಯ ಜಾನುವಾರ ರೋಗಗಳ ನಿಯಂತ್ರಣ ಯೋಜನೆ ಅಡಿ ಹಸುವಿಗೆ ಕಾಲುಬಾಯಿ ರೋಗ ಲಸಿಕೆ ಅಭಿಯಾನಯನ್ನು ಲಸಿಕೆ ನೀಡುವುದರ ಮೂಲಕ ತಾಲ್ಲೂಕಿನಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು ರೋಗಗಳಿಂದ ಪೂರ್ಣ ಸುರಕ್ಷತೆಗಾಗಿ ಮೂರು ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ಲಸಿಕೆಯನ್ನು ಹಾಕಿಸಬೇಕು ಎಂದರು.

ಪಶು ಪಾಲನಾ ಇಲಾಖೆಯಿಂದ ಜರುಗುತ್ತಿರುವ 'ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆಯನ್ನು ಹಾಕಿಸಿ ರೋಗಮುಕ್ತಗೊಳಿಸಬೇಕು' ಮೂಡಲಗಿಯ ಶ್ರೀ ಮಠದ ಪೂಜ್ಯರ ಆಶಿರ್ವಾರದಿಂದ ಸಕಲ ಜೀವಾತ್ಮಗಳು ಆರೋಗ್ಯವಾಗಿರಬೇಕು ಎಂದು ಮೂಡಲಗಿಯ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ. ಮೋಹನ ಕಮತ ಹೇಳಿದರು.

ಪಶು ಸಂಗೋಪನಾ ಇಲಾಖೆಯಪಾಲಿ ಕ್ಲಿನಿಕ್ ಉಪನಿರ್ದೇಶಕ ಡಾ. ಎಂ.ಬಿ. ವಿಭೂತಿ, ಜಿಲ್ಲಾ ಪಂಚಾಯತ ಸಿಇಓ ಎಫ್ ಜಿ ಚಿನ್ನನವರ ವವ್ಯಸ್ಥಾಪಕ ಸಂಗಮೇಶ ರೊಡ್ಡನ್ನವರ, ಡಾ. ಮಹಾದೇವಪ್ಪ ಕೌಜಲಗಿ, ಸುರೇಶ ಆದಪ್ಪಗೋಳ, ಮಹಾಂತೇಶ ಹೊಸೂರ, ಶಿವಶಂಕರ ಶಾಬಣ್ಣವರ, ಸರಸ್ವತಿ ಮುರಗೋಡ ಪಶು ಸಖಿಯರಾದ ನಿರ್ಮಲಾ, ಪೂಜಾ ಇದ್ದರು.

## ಬದುಕು

"'~~ಓ ಶಿವನೆ ನಿನ್ನಾಟವ ಬಲ್ಲವರಾರು
ಬದುಕೆಂಬುದುಮೂರುದಿನದಸಂತೆಜೀವವೆಂಬುದುಸುಖ–ದುಃಖ್ಖಗಳ
ಸಾಗರ ಬರುವ ಅಲೆ–ತೆರೆಗಳಿಗೆ ಎದೆಯೊಡ್ಡಿ ನಿಲ್ಲುವುದೇ ಸತ್ಯ

ಬೇಡವಾದಾಗ ಮುಟಿಗೆ ಮಾಡಿ ಭೂಮಿಗೆ ಬಿಸಾಕುವೆ
ಬೇಕಾದಾಗ ಕೈ ಬೀಸಿ ಕರೆಯುವೆ
ಎಲ್ಲ ವಿಜ್ಞಾನಿಗಳು ಏನೆಲ್ಲಾ ತಂತ್ರಗಳನ್ನು ಕಂಡು ಹಿಡಿದ್ರು
ಆದ್ರೆ ನಿನ್ನಾಟವ ಕಂಡು ಹಿಡಿಯಲು ಯಾವ ಯಂತ್ರವು ಸಿಗಲಿಲ್ಲ
ಕೊನೆಗೆ ನಿನ್ನಾಟ ಎಂದ್ರು
ಅದಕ್ಕೆ ಅಲ್ವೆ ನೀನು ದೇವರು ಎನಿಸಿಕೊಂಡಿದ್ದು

ಭೂಮಿ ಬಗೆದಾಗೆಲ್ಲಾ ನೀರು, ಕರುಳ ಅಗೆದಾಗೆಲ್ಲಾ ಕಣ್ಣೀರು
ನೀನಿರುವುದೇ ಆದರೆ ನಾನು ಹೇಳುವುದೆಲ್ಲವಾ ಕೇಳಿದ್ದೆಯಾದರೆ
ಚಿರನಿದ್ರೆಗೆ ಜಾರಿದ ಮಕ್ಕಳ ತಾಯಂದಿರ
ಕರುಳನ್ನೊಮ್ಮೆ ಬಗೆದು ನೋಡು
ಅಲ್ಲಿ ಏನಿಲ್ಲ ಬರೀ ...... ಕಣ್ಣೀರು.

ದ್ವಾಪರಯುಗ, ಕಲಿಯುಗ, ಸತ್ಯಯುಗ, ಎಂದು ಇರುವುದಾದರೆ
ಆ ಕರುಳುಗಳಿಗೆ ಸಾಂತ್ವನ ಕೊಡು
ಚಿರನಿದ್ರೆಗೆ ಜಾರಿದ ಮಕ್ಕಳಿಗೆ
ಇನ್ನೊಂದು ಜನ್ಮವೊಂದಿದ್ದರೆ
ಪುಣ್ಯ ತಾಣದಲ್ಲಿ ಜನ್ಮ ನೀಡು. "'~~"'

। ಶ್ರೀಮತಿ ನೀಲಮ್ಮ ಚಂ. ರೇವಡಿ
ಸರಕಾರಿ ಪ್ರೌಢಶಾಲೆ, ಮರೋಳ.



**ಮೂಡಲಗಿ : ಕರ್ನಾಟಕದ ಹೆಮ್ಮೆಯ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ನಡೆಸಿದ 1824ರ ಸ್ವಾತಂತ್ರ್ಯ ಸಂಗ್ರಾಮದ 200 ನೇ ವರ್ಷದ ವಿಜಯೋತ್ಸವದ ಅಂಗವಾಗಿ ದೆಹಲಿಯ ಸಂಸತ ಭವನದ ಆವರಣದಲ್ಲಿ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ರಾಣಿ ಚೆನ್ನಮ್ಮನ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.**

**ಈ ಸಂದರ್ಭದಲ್ಲಿ ಲೋಕಸಭೆಯ ಸಭಾಪತಿಗಳಾದ ಓಂ ಬಿರ್ಲಾ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ರೈಲ್ವೆ ಇಲಾಖೆ ರಾಜ್ಯ ಸಚಿವ ವಿ. ಸೋಮಣ್ಣ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ , ಅರವಿಂದ ಬೆಲ್ಲದ ಸೇರಿದಂತೆ ದೆಹಲಿ ಕರ್ನಾಟಕ ಸಂಘದ ಪ್ರಮುಖರು ಹಾಗೂ ಚೆನ್ನಮ್ಮನ ಅಭಿಮಾಗಳು ಉಪಸ್ಥಿತರಿದ್ದರು.**

# ವಿಶ್ವವಿದ್ಯಾಲಯ ಬ್ಲೂ ಆಯ್ಕೆ



**ಮಹಾಲಿಂಗಪುರ :** ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪದವಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ವಿನಾಯಕ ಬಟ್ಟಲ, ಶಟಲ್ ಬ್ಯಾಡ್ಮಿಂಟನ್‌ನಲ್ಲಿ ವಿಶ್ವವಿದ್ಯಾಲಯದ ಬ್ಲೂ ಆಗಿ ಆಯ್ಕೆಯಾಗಿದ್ದಾರೆ.

ಜಮಖಂಡಿಯ ಬಿಎಲ್‌ಡಿಇ ಕಾಲೇಜಿನಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಶಟಲ್ ಬ್ಯಾಡ್ಮಿಂಟನ್ ಆಯ್ಕೆ ಪ್ರಕ್ರಿಯೆಯಲ್ಲಿ ವಿನಾಯಕ ಬಟ್ಟಲ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಾಚಾರ್ಯ ಕೆ.ಎಂ.ಅವರಾದಿ ತಿಳಿಸಿದ್ದಾರೆ.

# ರಾಚಪ್ಪ ಅಮರಪ್ಪ ಹಂದ್ರಾಳ ನಿಧನ



**ಮಹಾಲಿಂಗಪುರ :** ಪಟ್ಟಣದ ಬಸವನಗರ ನಿವಾಸಿ, ಕುರುಹಿನಶೆಟ್ಟಿ ಸಮಾಜದ ರಾಚಪ್ಪ ಅಮರಪ್ಪ ಹಂದ್ರಾಳ(74) ಬುಧವಾರ ರಾತ್ರಿ ನಿಧನರಾದರು.ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಬಾಗಲಕೋಟ ಗ್ರಾಮೀಣ & ನಗರ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ

**ಬಾಗಲಕೋಟ :** ಸಂಘಟನೆಯು ಬಲಯುತವಾಗಿದ್ದರೆ ಎಂಥ ಸಮಸ್ಯೆಯನ್ನಾದರೂ ಬಗೆಹ–ರಿಸಬಹುದಾಗಿದೆ ಎಂದು ಸರಕಾರಿ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಶಿವಪ್ಪ ಹನಮಪ್ಪ ಗಣತಿ ಅಭಿಪ್ರಾಯ ಪಟ್ಟರು.

ಅವರು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಬಾಗಲಕೋಟ ಗ್ರಾಮೀಣ & ನಗರ ಘಟಕಕ್ಕೆ ಪದಾಧಿಕಾರಿಗಳಾಯ್ಕೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಯಾವುದೇ ಒಂದು ಸಮಾಜ ಅಭಿವೃದ್ಧಿ ಪಥದತ್ತ ಸಾಗಬೇಕಾದರೆ ಸಂಘಟನೆ ಬಲವಾಗಿರಬೇಕು ಎಂದರು.

ನಿವೃತ್ತ ಶಿಕ್ಷಕ ಹೆಚ್.ಡಿ.ಹೊಸಮನಿ ಮಾತನಾಡಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ,ದಿತ್ವೀಯ ಹಾಗೂ ತೃತೀಯ ಬರುವ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡುವದಾಗಿ ಘೋಷಿಸಿ ಸಂಘವು ಆ ದಿಶೆಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲ್ಲಿ ಎಂದರು.



ಸಭೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಬಸವರಾಜ ಚಲವಾದಿ,ಮೋಹನ ಕಾಂಬಳೆ ಮಾತನಾಡಿದರು.ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಪ್ರೇಮನಾಥ ಗರಸಂಗಿ ವಹಿಸಿದ್ದರು.

**ಪದಾಧಿಕಾರಿಗಳ ಆಯ್ಕೆ:**

ಬಾಗಲಕೋಟ ನಗರ ಘಟಕದ ಅಧ್ಯಕ್ಷರಾಗಿ ಮೋಹನ ಕಾಂಬಳೆ,ಉಪಾಧ್ಯಕ್ಷರಾಗಿ ಗಜಾನನ ಕಾಂಬಳೆ,ಕಾರ್ಯದರ್ಶಿ ಅಶೋಕ ನೀಲನಾಯಕ, ಖಜಾಂಚಿಂ–ಯಾಗಿ ಸುನೀಲ ಕೊಡಬಾಗಿ,ಸಂಘಟನಾ ಕಾರ್ಯದರ್ಶಿಯಾಗಿ ಮಹೇಶ ಬೀಳಗಿ,ಕಾರ್ಯಕಾರಿ ಸಮೀತಿಗೆ ಹನಮಂತ ಹೊಸಮನಿ ,ಮನೋಹರ ಗರಸಂಗಿ,ರವಿ ಗೆಜ್ಜಲಕಟ್ಟಿ, ಅವರುಗಳು ಅವಿರೋಧವಾಗಿ ಆಯ್ಕೆಯಾದರು.

ಗ್ರಾಮೀಣ ಘಟಕದ ಬಾಗಲಕೋಟ ತಾಲೂಕಾ ಅಧ್ಯಕ್ಷರಾಗಿ ಸಂಗಪ್ಪ ಚಲವಾದಿ ಸಾ:ಮುದುವಿನಕೊಪ್ಪ,ಉಪಾಧ್ಯಕ್ಷರಾಗಿ ಶ್ರೀಶೈಲ ದೊಡಮನಿ ಸಾ:ಭಗವತಿ,ಕಾರ್ಯದರ್ಶಿಯಾಗಿ ಮುತ್ತಪ್ಪ ಚಲವಾದಿ ಸಾ.:ಹಳ್ಳೂರು,ಖಜಾಂಚಿಂ–ಯಾಗಿ ಹನಮಂತ ಚಲವಾದಿ ಸಾ:ಶಿರುಗುಂಪಿ,ಸಂಘಟನಾ ಕಾರ್ಯದರ್ಶಿ ಲಕ್ಷ್ಮಣ ಚಲವಾದಿ ಸಾ:ಬೆನಕಟ್ಟಿ ಕಾರ್ಯಕಾರಿ ಸಮೀತಿಗೆ ಬಸಪ್ಪ ವಾಲೀಕಾರ ಸಾ:ನಾಯನೇಗಲಿ,ಪರಸುರಾಮ ಚಲವಾದಿ ಸಾ:ಕಡ್ಲಿಮಟ್ಟಿ,ಗ್ಯಾನಪ್ಪ ಚಲವಾದಿ ಸಾ:ನಾಗರಾಳ,ಹನಮಂತ ಹೊಸಮನಿ ಸಾ:ಹಂಡರಗಲ್ಲ, ಅಡಿಯಪ್ಪ ಕಾಳಿ ಸಾ:ಬೆನಕಟ್ಟಿ ಅವಿರೋಧವಾಗಿ ಆಯ್ಕೆಯಾದರು

ಸಭೆಯಲ್ಲಿ ಮಂಜುನಾಥ ಚಲವಾದಿ(ಶಿರಗುಂಪಿ),ವೈ.ಎನ್. ಚಲವಾದಿ(ನವನಗರ)ಬಸಪ್ಪ ಚಲವಾದಿ,ಗ್ಯಾನಪ್ಪ ಚಲವಾದಿ (ಬೇವೂರು)ಬಸವರಾಜ ವೈ ಚಲವಾದಿ(ಅಚನೂರ)ಬಸವರಾಜ ಚಲವಾದಿ (ಮ್ಯಾಗೇರಿ),ಸಿದ್ದಪ್ಪ ಚಲವಾದಿ (ಬೇವೂರ),ಚಂದ್ರು ನಾಯನೇಗಲಿ,ಜಗದೀಶ ಕಾಳಿ,ಶನಸಪ್ಪ ನಾರಾಯಣಿ ಮೊದಲಾದವರು ಉಪಸ್ಥಿತರಿದ್ದರು.

# "ವಿಶ್ವ ರೇಬೀಸ್ ರೋಗ ದಿನಾಚರಣೆ" ಶಾಲಾ ಮಕ್ಕಳಲ್ಲಿ ಜಾಗೃತಿ



**ಬಾಗಲಕೋಟ :** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮನ್ನಿಕಟ್ಟಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ "ವಿಶ್ವ ರೇಬೀಸ್ ರೋಗ ದಿನಾಚರಣೆ" ಆಯೋಜಿಸಲಾಗಿತ್ತು. ಶಾಲ್ಲಾ ಮುಖ್ಯ ಶಿಕ್ಷಕ ಎನ್ ಎಮ್ ಕಮ್ಮಾರ ರೇಬೀಸ್ ರೋಗ ಮಾಹಿತಿ ಕರಪತ್ರ ಬಿಡುಗಡೆ ಮಾಡುವ ಮುಖಾಂತರ ಚಾಲನೆ ನೀಡಿದರು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು, ನಾಯಿ ಕಡಿತದಿಂದ ರೇಬೀಸ್ ರೋಗ ಹರಡುತ್ತದೆ. ಗಾಯವನ್ನು ತಕ್ಷಣ ನೀರು ಸಾಬೂನಿನಿಂದ ಸ್ವಚ್ಛ ಗೊಳಸಬೇಕು ಹತ್ತಿರದ ಸರಕಾರಿ ಆಸ್ಪತ್ರೆಗೆ ಹೋಗಿ ವೈದ್ಯರ ಸಲಹೆ ಮೇರೆಗೆ ರೇಬೀಸ್ ಲಸಿಕೆಯ ಪೂರ್ಣಪ್ರಮಾಣ ಪಡೆಯಿರಿ. ಸಾಕು ನಾಯಿಗಳಿಗೆ ತಪ್ಪದೇ ಪಶು ಆಸ್ಪತ್ರೆಯಲ್ಲಿ ನಾಯಿಗಳಿಗೆ ಲಸಿಕೆ ಹಾಕಿಸಬೇಕು.ನಾಯಿಕಡಿತತಪ್ಪಿಸಿಕೊಳ್ಳಿಮುಂಜಾಗ್ರತೆ ಪಾಲಿಸಬೇಕು ಎಂದರು. ಮುಖ್ಯ ಶಿಕ್ಷಕರಾದ ಎನ್ ಎಮ್ ಕಮ್ಮಾರ ಆರೋಗ್ಯ ಇಲಾಖೆಯ ಸಲಹೆ ಸೂಚನೆ ಪಾಲಿಸಿಬೇಕು. ಆರೋಗ್ಯವಂತ ಮಕ್ಕಳು ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದರು.ವಿ ಎಮ್ ಯಡಹಳ್ಳಿ ಸ್ವಾಗತಿಸಿದರು. ಗುರುಮಾತೆ ಎಮ್ ಎ ಗಡ್ಡಿ ವಂದನಾರ್ಪಣೆ ಮಾಡಿದರು. "ವಿಶ್ವ ರೇಬೀಸ್ ರೋಗ ದಿನಾಚರಣೆ" ಕಾರ್ಯಕ್ರಮದಲ್ಲಿ, ಆರೋಗ್ಯ ಅಧಿಕಾರಿಗಳು, ಶಾಲಾ ಶಿಕ್ಷಕರಾದ,ಬಿ ಎಮಾ ಅನಗವಾಡಿ,ಎಮ್ ಡಿ ಭಗವತಿ, ಗುರುಮಾತೆಯರಾದ, ಎಸ್ ಎ ಪತ್ತಾರ ಬಿಸಿಊಟದ ಕಾರ್ಯಕ್ರಮ ಮುಖ್ಯಅಡಿಗೆಯವರು,ಸಹಾಯಕರು, ಶಾಲಾ ಮುದ್ದು ಮಕ್ಕಳು ಭಾಗವಹಿಸಿದ್ದರು.

# ಭಾತರದಲ್ಲಿ ಪ್ರಥಮ ಸ್ವಾತಂತ್ರ್ಯದ ಜ್ಯೋತಿಯ ಕಿಚ್ಚು ಹಚ್ಚಿದ ಕಿತ್ತೂರ ಚೆನ್ನಮ್ಮ





**ಬಾದಾಮಿ :** ನಗರದ ತಹಶೀಲ್ದಾರ ಕಚೇರಿಯಲ್ಲಿ ಕಿತ್ತೂರ ರಾಣಿ ಚನ್ನಮ್ಮನ 200ನೇ ವಿಜಯೋತ್ಸವವನ್ನು ತಹಶೀಲ್ದಾರ ಪಂಚಮಸಾಲಿ ಸಮಾಜ ಬಾಂಧವರ ಜೊತೆ ಆಚರಿಸಿದರು, ನಂತರ ಹೊಸದಾಗಿ ನಿರ್ಮಾಣವಾಗುತ್ತಿರುವ ಮಿನಿ ವಿಧಾನಸೌಧ ಪಕ್ಕದಲ್ಲಿರುವ ಕಿತ್ತೂರ ಚನ್ನಮ್ಮ ವೃತ್ತದಲ್ಲಿ ಚನ್ನಮ್ಮಳ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಪೂಜೆ ಮಾಡುವ ಮೂಲಕ ಜಯಂತಿ ಹಾಗೂ ವಿಜಯೋತ್ಸವವನ್ನು ಆಚರಿಸಿದರು

ಈ ಸಂದರ್ಭದಲ್ಲಿ ಕಿತ್ತೂರ ಚೆನ್ನಮ್ಮ ವಿದ್ಯಾ ಸಂಸ್ಥೆಯ ಚೇರಮನ್ ಡಾ. ಎನ್.ಡಿ.ದೊಡ್ಡನಿಂಗಪ್ಪನವರ ಮಾತನಾಡಿ ನಗರದ ಕಿತ್ತೂರ ಚೆನ್ನಮ್ಮ ಮಹಿಳಾ ಬ್ಯಾಂಕಿನಲ್ಲಿ ಹಮ್ಮಿಕೊಂಡ ಕಿತ್ತೂರ ಚೆನ್ನಮ್ಮ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ರಾಣಿ ಚೆನ್ನಮ್ಮ ಕರ್ನಾಟಕದ ಕಾಕತಿ ಎಂಬ ಹಳ್ಳಿಯಲ್ಲಿ 1778 ರಲ್ಲಿ ಜನಸಿ, ಮಲ್ಲಸರ್ಜ ದೇಸಾಯಿಯ ಎರಡನೇಯ ಪತ್ನಿಯಾಗಿ ಕಿತ್ತೂರಿನ ರಾಣಿಯಾದಳು, ಕುದುರೆ ಏರಿ ಕತ್ತಿ ಹಿಡಿದು ಹೋರಾಟ ಮಾಡಿ ಥ್ಯಾಕರೆಯನ್ನು ಕೊಂದು ವಿಜಯಶಾಲಿಗಿ ಸ್ವತಂತ್ರ್ಯ ಸಂಗ್ರಾಮಕ್ಕೆ ಸ್ಪೂರ್ತಿಯಾಗಿದ್ದು ಸ್ವಾತಂತ್ರ್ಯದ ಜ್ಯೋತಿ ಹಚ್ಚಿದ ವೀರವನಿತೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಣ್ಣ ಯಲಿಗಾರ, ಮಾತನಾಡಿ ವೀರ ರಾಣಿ ಕಿತ್ತೂರ ಚನ್ನಮ್ಮ ಒಂದು ಸಮಾಜಕ್ಕೆ ಸೀಮಿತವಾಗಿಲ್ಲ. ಅ.23 ರಂದು ಚನ್ನಮ್ಮ ಬ್ರಿಟಿಷ್ಯರ ವಿರುದ್ದ ಜಯ ಸಾಧಿಸಿದ್ದು ಹೆಮ್ಮೆಯ ಸಂಗತಿ, ಕಳೆದ ವಾರ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯಂ–ಜಯ ಶ್ರೀಗಳ ನೇತೃತ್ವದಲ್ಲಿ ಸಮಾಜದ ವಕೀಲರರೊಂದಿಗೆ ಸಿಎಂ ಸಿದ್ರಾಮಯ್ಯ ಅವರೊಂದಿಗೆ 2ಎ ಮೀಸಲಾತಿ ಸಲುವಾಗಿ ಚರ್ಚಿಸಲಾಯಿತು, 13 ಜಿಲ್ಲೆಗಳಲ್ಲಿ ಸರ್ವೆ ಕಾರ್ಯವಿದ್ದು ನಂತರ ಆಯೋಗದಿಂದ ಮಾಹಿತಿ ಪಡೆದು ಮುಂದಿನ ತೀರ್ಮಾಣ ಮಾಡುತ್ತೇವೆಂದರು, ಸ್ಪಷ್ಟ ತೀರ್ಮಾಣ ಕೈಗೊಳ್ಳದ ಕಾರಣ ಅಸಮಾದಾನ ವ್ಯಕ್ತವಾಯಿತು ಎಂದು ಮಾಹಿತಿ ನೀಡಿದರು.

ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಎಂ.ಎಸ್.ರುದ್ರಗೌಡ್ರ ಮಾತನಾಡಿ ಡಿಶಂಬರ ಇಲ್ಲವೇ ಜನೇವರಿಯಲ್ಲಿ ಪಂಚಮಸಾಲಿ ಸಮಾವೇಶ ಹಾಗೂ ಕಿತ್ತೂರ ಚನ್ನಮ್ಮ ಮೂರ್ತಿ ಮೇರವಣಿಗೆಯೊಂದಿಗೆ ಪ್ರತಿಷ್ಠಾಪನೆ ಮಾಡಲಾಗುವುದು ಎಂದರು, ತಹಶೀಲ್ದಾರ ಮಧುರಾಜ, ಪಿ.ಎಸ್.ಐ ನಿಂಗಪ್ಪ ಪೂಜಾರ, ರಮೇಶ ಹಾದಿಮನಿ, ಕಾರ್ಯದರ್ಶಿ ಅಶೋಕ ಗಂಗಾಲ, ನಿಂಗಪ್ಪ ಹೊಸಮನಿ, ಮಹೇಶ ಪಾಟೀಲ, ಶರಣಪ್ಪ ಮಾವಿನಮರದ, ಕಿತ್ತೂರ ಚನ್ನಮ್ಮ ಮಹಿಳಾ ಬ್ಯಾಂಕ್ ಅಧ್ಯಕ್ಷೆ ಶಿರೂರ, ಉಪಾಧ್ಯಕ್ಷ ಬಸವರಾಜ ದೂಳಪ್ಪನವರ, ಪಂಚಸೈನ್ಯ ತಾಲೂಕಾಧ್ಯಕ್ಷ ಮಳಿಶಾಂತ ಬೀಳೆಬಾಳ, ಬಸವರಾಜ ಉಳ್ಳಾಗಡ್ಡಿ, ಸಂಗು ಚೌದ್ರಿ, ವೀರಣ್ಣ ಸಾತನ್ನವರ, ಪುರಸಭಾ ಸದಸ್ಯ ಅಶೋಕ ಯಲಿಗಾರ, ಗುಂಡಪ್ಪ ತೀರ್ಥಪ್ಪನವರ, ಕುಮಾರ ಡಾಣಕ, ಆರ್.ಬಿ ಸಂಕದಾಳ. ರಮೇಶ ಉಳ್ಳಾಗಡ್ಡಿ, ಮಹಿಳಾ ಬ್ಯಾಂಕ್ ಮು.ಕಾ.ನಿ ಲೀಲಾವತಿ ಬಾನದ ಹಾಜರಿದ್ದರು.

## ನವನಗರ ಸ.ಪ್ರ.ದ ಕಾಲೇಜಿನಲ್ಲಿ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಆಚರಣೆ

# ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗಿಸಿದ ಮೊದಲ ವೀರಮಹಿಳೆ ಚನ್ನಮ್ಮ: ಡಾ. ಅರುಣಕುಮಾರ ಗಾಳಿ



**ಬಾಗಲಕೋಟೆ :** ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರೀಟಿಷರ್ ವಿರುದ್ಧ ಹೋರಾಡಿದ ಕರ್ನಾಟಕ ಕಿತ್ತೂರ ರಾಣಿ ಚನ್ನಮ್ಮಳು ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗಿಸಿದ ಪ್ರಥಮ ವೀರಮಹಿಳೆಯಾಗಿದ್ದಾಳೆ ಎಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು.

ಅವರು ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧುವಾರದಂದು ಆಚರಿಸಿದ ಕಿತ್ತೂರು ರಾಣಿ ಚನ್ನಮ್ಮಳ ಜಯಂತಿ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾತನಾಡಿದರು.

ಮುಂದುವರಿದು ಮಾತನಾಡಿ ನಮ್ಮ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ ಹಾಡಿದ ಕೀರ್ತಿ ಕಿತ್ತೂರು ಸಂಸ್ಥಾನಕ್ಕೆ ಸಲ್ಲುತ್ತದೆ. 1824 ರಲ್ಲಿ ಬ್ರೀಟಿಷ್ ಸರ್ಕಾರದ ಆಂಗ್ಲರ ವಿರುದ್ಧ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರಾಣಿ ಚನ್ನಮ್ಮ ಅವರ ಸಾಹಸ, ಶೌರ್ಯ ಹಾಗೂ ರಾಷ್ಟ್ರಾಭಿಮಾನ ಎಂದೆಂದಿಗೂ ಆದರ್ಶವಾಗಿದೆ. ಇಂತಹ ಸ್ವಾತಂತ್ರ್ಯ ಹೋರಾಟಗಾರ್ತಿಯ ಬದುಕು ಇಂದಿನ ಯುವಜನತೆಗೆ ಪ್ರೇರಣೆಯಾಗಿದೆ. ಭಾರತೀಯ ಮಹಿಳೆಯರ ಸ್ವಾಭಿಮಾನದ ಸಂಕೇತವಾಗಿದ್ದು, ರಾಣಿ ಚನ್ನಮ್ಮಳ ಪರಾಕ್ರಮಗಳನ್ನು ನಮ್ಮ ಜನಪದರು ಲಾವಣಿ ಪದಗಳಲ್ಲಿ ಹಾಡಿ ಹೊಗಳಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ್ತಿ ವೀರರಾಣಿ ಚನ್ನಮ್ಮಳ ದೇಶಪ್ರೇಮವನ್ನು ನಾವೆಲ್ಲರೂ ಬೆಳಸಿಕೊಳ್ಳಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಶಾಶ್ವತ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 1200 ಕೋಟಿ ರೂ.ಗಳ ಯೋಜನೆಗೆ ಶೀಘ್ರ ಚಾಲನೆ: ಶಾಸಕ ನಾರಾ ಭರತ್ ರೆಡ್ಡಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ, ಅ.25 :** ಬಳ್ಳಾರಿ ನಗರದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು 1200 ಕೋಟಿ ರೂ.ಗಳ ಯೋಜನೆ ರೂಪಿಸಲಾಗಿದ್ದು, ಯೋಜನೆಗೆ ಶೀಘ್ರ ಚಾಲನೆ ನೀಡಲಾಗುವುದು ಎಂದು ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಅವರು ಇಂದು ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿಅವರಹುಟ್ಟುಹಬ್ಬದಪ್ರಯುಕ್ತ ಅಭಿಮಾನಿಗಳು ಮತ್ತು ಎನ್'ಬಿಆರ್ ಟೀಮ್ ಹಮ್ಮಿಕೊಂಡಿದ್ದ ಔತಣಕೂಟ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮೋತಿ ವೃತ್ತದಲ್ಲಿ ನನ್ನ ಅಭಿಮಾನಿಗಳು ಹಾಕಿರುವ135 ಅಡಿ ಕಟೌಟ್ ಕಣ್ಣೆತ್ತಿ ನೋಡುವ ತಾಕತ್ತು ವಿರೋಧ ಪಕ್ಷದವರಿಗಿಲ್ಲ ಎಂದು ಅವರು ಹೇಳಿದರು.

ನಾನು ಶಾಸಕನಾಗಿದ್ದು ನಿಮ್ಮ ಆಶೀರ್ವಾದದಿಂದ, ನಿಮ್ಮ ಭಿಕ್ಷೆಯಿಂದ ಎಂದು ಹೇಳಿದ ಅವರು ನೀವೆಲ್ಲ ಸೇರಿ ನನ್ನ ಗೆಲ್ಲಿಸಿ ಶಾಸಕನಾಗಿ ಮಾಡಿದ್ದೀರಿ ಎಂದರು.

ನಗರದ ಮೂಲಸೌಕರ್ಯ ಅಭಿವೃದ್ಧಿಗಾಗಿ ಹತ್ತಾರು ಕೋಟಿ ಅನುದಾನ ತಂದಿರುವೆ ಎಂದು ಹೇಳಿದ ಭರತ್ ರೆಡ್ಡಿ, ಕೋಲ್ಡ್ ಸ್ಟೋರೇಜ್, ತ್ಯಾಜ್ಯ ನಿರ್ವಹಣೆಯ (ಬಯೋ ಗ್ಯಾಸ್ ಘಟಕ ನಿರ್ಮಾಣಕ್ಕಾಗಿ 51 ಕೋಟಿ ರೂ.) ಕಾಮಗಾರಿಗಳಿಗಾಗಿ ಅನುದಾನ ತಂದಿರುವೆ, ಎಪಿಎಂಸಿಯ ಆವರಣದ ಅಭಿವೃದ್ಧಿಗಾಗಿ 27 ಕೋಟಿ ಅನುದಾನ ತಂದಿರುವೆ ಎಂದರು.






ತುಂಗಭದ್ರಾ ಜಲಾಶಯದಿಂದ ನೀರು ತರುವುದಾಗಿ ಬಹಳ ಜನ ಬಾಯಿ ಮಾತಲ್ಲಿ ಹೇಳಿದರು, ಆದರೆ ನಾನು 1200 ಕೋಟಿ ರೂ. ಅನುದಾನದಲ್ಲಿ ಬಳ್ಳಾರಿ ನಗರಕ್ಕೆ ನೇರವಾಗಿ ನೀರು ಪೂರೈಸಲು ಯೋಜನೆ ರೂಪಿಸಿರುವೆ, ನಾನು ಮನೆಯಲ್ಲಿ ಯಾವ ನೀರು ಕುಡಿಯುತ್ತೇನೇಯೋ ನನ್ನ ಜನರು ಅದೇ ನೀರು ಕುಡಿಯಬೇಕು ಎಂದು ಅಭಿಪ್ರಾಯಪಟ್ಟರು.

ಗಡಿಗಿ ಚನ್ನಪ್ಪ ವೃತ್ತ ಶೀಘ್ರದಲ್ಲಿ ಉದ್ಘಾಟನೆ ಆಗಲಿದೆ. ಬಿಜೆಪಿಯವರು ಅನ್ನಬಹುದು; ನಾವು ಮಾಡಿದ ಕಾಮಗಾರಿ ಎಂದು, ಆದರೆ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮನವಿ ಮಾಡಿ, 21 ಕೋಟಿ ಅನುದಾನ ಹೆಚ್ಚುವರಿಯಾಗಿ ತಂದಿರುವೆ ಎಂದರು.

ವಸತಿಇಲಾಖೆಯಅಡಿಮುಂಡ್ರಿಗಿಬಳಿಯಿರುವ ಮಹಾತ್ಮ ಗಾಂಧಿ ಟೌನ್'ಶಿಪ್ ಯೋಜನೆಯ ಅಡಿ 820 ಮನೆಗಳನ್ನು ಶೀಘ್ರ ಹಸ್ತಾಂತರ ಮಾಡಿ, ನಿಮ್ಮ ಮನೆಯ ಗೃಹ ಪ್ರವೇಶಕ್ಕೆ ಬರುವೆ, ಇಷ್ಟು ಮಾತ್ರವಲ್ಲ; ಮಂದಿರ, ಮಸೀದಿ, ಚರ್ಚ್ ಗಳ ಅಭಿವೃದ್ಧಿಗಾಗಿ ಕೋಟ್ಯಾಂತರ ರೂ. ಅನುದಾನ ತಂದಿರುವೆ ಎಂದರು.

ಈ ಹಿಂದೆ ಬಳ್ಳಾರಿಯಲ್ಲಿ ಗೂಂಡಾಗಿರಿ ಇತ್ತು, ಆದರೆ ನಾನು ಶಾಸಕ ಆದ ನಂತರ ಕಾನೂನು ಸುವ್ಯವಸ್ಥೆ ಸುಧಾರಿಸಿದೆ ಎಂದ ಶಾಸಕ ನಾರಾ ಭರತ್ ರೆಡ್ಡಿ, ಮೊದಲಿನ ಹಾಗೆ ಯಾರಾದರೂ ದೌರ್ಜನ್ಯ ಮಾಡಿದರೆ, ನಿಮ್ಮ ರಕ್ಷಣೆಗೆ ನಾನಿರುವೆ ಎಂದರು.

ನಮ್ಮ ಮನೆತನದ ಕೊಡುಗೆ ಕೊಟ್ಟಿರುವ ಬಗ್ಗೆ ಮಾತನಾಡಿದ ಕಂಪ್ಲಿ ಶಾಸಕ ಗಣೇಶ್ ಅವರದ್ದು ದೊಡ್ಡತನ, ಅವರಿಗೆ ಸಾವಿರಾರು ಜನ ಅಭಿಮಾನಿಗಳು ಇದ್ದಾರೆ, ಅವರು ಕಂಪ್ಲಿ ಕ್ಷೇತ್ರದಿಂದ ನಿರಂಅಂತರವಾಗಿ ಗೆದ್ದು ಶಾಸಕರಾಗಿ ದಾಖಲೆ ನಿರ್ಮಿಸುತ್ತಾರೆಂಬ ವಿಶ್ವಾಸವಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಕಂಪ್ಲಿ ಶಾಸಕ ಜೆ.ಎನ್.ಗಣೇಶ್, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅಪ್ಪಟ ಹೃದಯವಂತ ಮನುಷ್ಯ, ವೈರಿಗಳ ಮನಸನ್ನೂ ಗೆಲ್ಲಬಲ್ಲ ವ್ಯಕ್ತಿ ಎಂದು ಹೇಳಿದ ಅವರು, ಇಂತಹ ಶಾಸಕರನ್ನು ಪಡೆದ ಬಳ್ಳಾರಿಯ ಜನ ಭಾಗ್ಯಶಾಲಿಗಳು ಎಂದರು.

ಭರತ್ ರೆಡ್ಡಿ ಶ್ರೀಮಂತ ಕುಟುಂಬದಲ್ಲಿ ಜನಿಸಿರಬಹುದು ಸದಾ ಬಡವರ ಜನರ ಬಗ್ಗೆ ಆಲೋಚಿಸುತ್ತಾರೆ,ಭರತ್‌ರೆಡ್ಡಿಯವರುಕೇವಲ ಶಾಸಕರಾಗಿ ಅಲ್ಲ, ಅವರು ಇದೇ ಅವಧಿಯಲ್ಲಿ ಸಚಿವರಾಗಬೇಕೆಂದು ಹಾರೈಸುವೆ, ಮೊದಲ ಬಾರಿಗೆ ಶಾಸಕರಾದವರು ಬಹಳ ಜನ ಸಚಿವರಾಗಿದ್ದಾರೆ, ಭರತ್ ರೆಡ್ಡಿಯವರು ಸಚಿವರಾಗಬೇಕೆಂದು ಕನಕದುರ್ಗಮ್ಮ ತಾಯಿಗೆ ಬೇಡಿಕೊಂಡಿರುವೆ ಎಂದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಕಟ್ಟೆಮನೆ ನಾಗೇಂದ್ರ, ಅಬ್ದುಲ್ ಬಾರಿ, ಮಾಜಿ ಮೇಯರ್ ರಾಜೇಶ್ವರಿ, ಪಾಲಿಕೆಯ ಸದಸ್ಯರಾದ ರಾಮಾಂಜನೇಯ, ಕುಬೇರಾ, ಎಂ.ಪ್ರಭಂಜನಕುಮಾರ್, ಮಿಂಚು ಸೀನಾ, ಕೆ.ನೂರ್ ಮಹಮ್ಮದ್, ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು, ಚಾನಾಳ್ ಶೇಖರ್, ವಿಷ್ಣು ಬೋಯಪಾಟಿ, ಸತೀಶ್ ರೆಡ್ಡಿ, ಅಲಿವೇಲುಸುರೇಶ್,ಮಂಜುಳಾ,ಎಂ.ವಿವೇಕ್, ಸಿಲಾರ್, ವಿಶ್ವ, ರಘುನಾಥ ಪಾಟೀಲ್, ಸಿದ್ಧೇಶ್, ಧರ್ಮಶ್ರೀ, ವಾಸು, ರಘು ಎಂ.ನಾರಾಯಣ ರಾವ್ (ಚಿಟ್ಟಿ), ಪಾಲಿಕೆ ಸದಸ್ಯರಾದ ಶಿವರಾಜ್, ರಾಮಾಂಜನೇಯ, ಎಂ.ಪ್ರಭಂಜನಕುಮಾರ್, ಮಿಂಚು ಶ್ರೀನಿವಾಸುಲು, ರಾಮು, ವೆಂಕಟೇಶ, ಭರತ್ ಕುಮಾರ್, ರಾಮು, ತೌಸಿಫ್, ತಬ್ರೇಜ್, ಮೊದಲಾದವರು ಹಾಜರಿದ್ದರು.

## ಶಾಸಕ ನಾರಾ ಭರತ್ ರೆಡ್ಡಿ ಹುಟ್ಟುಹಬ್ಬ ಭಾವಚಿತ್ರಕ್ಕೆ ಅಭಿಮಾನಿಗಳಿಂದ ಹಾಲಿನ ಅಭಿಷೇಕ

● ವಾರ್ತಾಲೋಕ ವಾರ್ತೆ

**ಬಳ್ಳಾರಿ,ಅ.25 :** ನಗರ ಶಾಸಕ ಭರತ್ ರೆಡ್ಡಿ ಅವರ ಹುಟ್ಟುಹಬ್ಬದ ಪ್ರಯುಕ್ತ ಡಾ. ರಾಜಕುಮಾರ್ ರಸ್ತೆಯ ಪವನ್ ಹೋಟೆಲ್ ಹತ್ತಿರ ಅವರ ಅಭಿಮಾನಿಗಳು ಶಾಸಕ ನಾರಾ ಭರತ್ ರೆಡ್ಡಿ ಭಾವಚಿತ್ರಕ್ಕೆ ಹಾಲೆರೆದು ಅಭಿಷೇಕ ಮಾಡಿ ಹರ್ಷ ವ್ಯಕ್ತಪಡಿಸಿದರು.



ಕಾಂಗ್ರೆಸ್ ಮುಖಂಡರಾದ ಮುಕ್ಕಣ್ಣ ಅವರ ನೇತೃತ್ವದಲ್ಲಿ ಭರತ್ ರೆಡ್ಡಿ ರವರ ಹಲವು ಆರು ಅಭಿಮಾನಿಗಳು ಸೇರಿ ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಹುಟ್ಟುಹಬ್ಬವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಮಾಧ್ಯಮ ಜೊತೆ ಮಾತನಾಡಿದ ಮುಖಂಡ ಮುಕ್ಕಣ್ಣ ಮಾತನಾಡಿ ಹುಟ್ಟುಹಬ್ಬಕ್ಕೆ ಶುಭಕೋರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರಿಗೆ ಪರ್ಮೆಂಟ್ ಮಾಡಬೇಕೆಂದು ಶಾಸಕರಿಗೆ ಮನವಿ ಮಾಡಿದರು.

ಯುವ ಮುಖಂಡ ಉಮೇಶ್ ಮಾತನಾಡಿ ಮುಂದಿನ ದಿನಗಳಲ್ಲಿ ನಾವುಗಳು ಯಾವುದೇ ಸಂದರ್ಭದಲ್ಲಿ ನಮ್ಮ ಶಾಸಕರ ಜೊತೆ ಇರುತ್ತವೆ, ತಾಯಿ ದುರ್ಗಮ್ಮ ದೇವಿ ಅವರಿಗೆ ಇನ್ನು ಹೆಚ್ಚಿನ ಆಯಸ್ಸು, ಆರೋಗ್ಯವನ್ನು ನೀಡಿ ಬಳ್ಳಾರಿ ಜನತೆಯ ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ತಾಯಿ ದುರ್ಗಾ ಮಾತೆಯಲ್ಲಿ ಬೇಡಿಕೊಂಡಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಶಿವರಾಜ್, ಹೇಮಂತ್ ರಾಜ್,ರಾಜ, ಎ.ಕೆ. ರವಿ,ಶ್ರೀಕಾಂತ್, ಅಖಿಲ್, ಕಲ್ಯಾಣ, ಸೇರಿದಂತೆ ಇನ್ನಿತರರಿದ್ದರು.

## ಮೆಣಸಿನಕಾಯಿ ಹೂವನ್ನು ಕಾಪಾಡುವ ರಶಿನ್ಬನ್

● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ.25 :** ಮೆಣಸಿನಕಾಯಿ ಕೃಷಿಯ ಯಶಸ್ಸಿನಲ್ಲಿ ಹೂವುಗಳು ಮುಖ್ಯ ಪಾತ್ರ ವಹಿಸುತ್ತವೆ. ಏಕೆಂದರೆ ಅವು ಮೆಣಸಿನಕಾಯಿ ಸಸ್ಯದ ಪ್ರಮುಖ ಆರ್ಥಿಕ ಭಾಗವಾಗಿವೆ. ಈ ನಿರ್ಣಾಯಕ ಅಂಶವನ್ನು ಗುರುತಿಸಿ, ರೈತರು ಈ ಪ್ರಮುಖ ಸಸ್ಯ ರಚನೆಗಳನ್ನು ರಕ್ಷಿಸುವ ವೈಜ್ಞಾನಿಕ ಪರಿಹಾರಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ.

Godrej agrovet
brighter farming

ಜಿಎವಿಎಲ್‌ನ ಬೆಳೆ ಸಂರಕ್ಷಣಾ ವ್ಯವಹಾರದ ಸಿಇಒಎನ್.ಕೆ.ರಾಜವೇಲು. ಮೆಣಸಿನಕಾಯಿ ರೈತರು, ತಮ್ಮ ಬೆಳೆಗೆ ಅದರ ಬೆಳವಣಿಗೆಯ ಹಾದಿಯುದ್ದಕ್ಕೂ ಸರಿಯಾದ ಸಮಯದಲ್ಲಿ ಸರಿಯಾದ ಪೋಷಕಾಂಶಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಬೇಕು. ಜೊತೆಗೆ ಬೆಳೆಯು ಅಜೈವಿಕ ಒತ್ತಡದಿಂದ ಮುಕ್ತವಾಗಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಕೀಟನಾಶಕಗಳ ಅವೈಜ್ಞಾನಿಕ ಸಂಯೋಜನೆಯು ಬೆಳೆಗಳು ಮತ್ತು ಪರಿಸರದ ಮೇಲೆ ತೀವ್ರ ಪರಿಣಾಮಬೀರುತ್ತದೆ. ?ರಶಿನ್ ಬನ್? ಈ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂದಿದ್ದಾರೆ. ಏನಿದು ರಶಿನ್ ಬನ್ ಹೇಗೆ ಬಳಸಬೇಕು.

ಮೆಣಸಿನ ಬೆಳೆಗೆ ಕಾಡುವ ನುಸಿ, ಹುಳಗಳ ಕಾಟವನ್ನು ತಪ್ಪಿಸಲು ಬಳಸುವ ಔಷಧಿ.ಇದನ್ನು ಸಸಿನೆಟ್ಟ 45-75 ದಿನಗಳಲ್ಲಿ ಬಳಸಿದರೆ ಒಂದೇ ಹೊಡೆತದಲ್ಲಿ ಪರಿಣಾಮಕಾರಿ ಪರಿಹಾರವನ್ನು ಒದಗಿಸುತ್ತದೆ. ಇದು ರೈತರ ಸಮಯ ಮತ್ತು ಶ್ರಮವನ್ನು ಉಳಿಸುತ್ತದೆ ಮತ್ತು ಅವರ ಬೆಳೆಯ ಆರ್ಥಿಕಮೌಲ್ಯವನ್ನು ರಕ್ಷಿಸುತ್ತದೆ ಎಂದು ಕಂಪನಿ ತಿಳಿಸಿದೆ.

## ಒಳಮೀಸಲಾತಿ ವರ್ಗೀಕರಣವನ್ನು ಸಚಿವ ಸಂಪುಟ ಸಭೆಯಲ್ಲಿ ತಿರಸ್ಕರಿಸಿ: ಡಾ. ಕೆ. ಹನುಮಂತಪ್ಪ



● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ 25 :** ಪರಿಶಿಷ್ಟ ಜಾತಿಯ ಒಳಮೀಸಲಾತಿಯ (ವರ್ಗೀಡಿಕರಣ) ಸಂಬಂಧಿಸಿದಂತೆ ಇತ್ತೀಚೆಗೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಪ್ತ ಪೀಠವು ತೀರ್ಪು ನೀಡಿದ್ದು ಸರಿಯಷ್ಟೆ ಈ ಬಗ್ಗೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಒಳಮೀಸಲಾತಿ ಕುರಿತಾಗಿ ಅವೈಜ್ಞಾನಿಕ, ಅತಾರ್ಕಿಕ ಹಾಗೂ ಅಸಮರ್ಥನೀಯ ದತ್ತಾಂಶಗಳನ್ನು ಆಧರಿಸಿ ಒಳಮೀಸಲಾತಿ ವರ್ಗೀಕರಣಕ್ಕೆ ಮುಂದಾಗಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆಯಾಗಿದೆ ಯಾವುದೇ ಕಾರಣಕ್ಕೂ ಒಳ ಮೀಸಲಾತಿಯನ್ನು ಜಾರಿಗೊಳಿಸಬಾರದು ಎಂದು ಕುಳುವ ಸಮಾಜದ ರಾಜ್ಯ ಉಪಾಧ್ಯಕ್ಷರಾದ ಡಾಕ್ಟರ್ ಕೆ ಹನುಮಂತಪ್ಪ ಸರ್ಕಾರವನ್ನು ಆಗ್ರಹಿಸಿದರು.

ಅವರು ಇಂದು ನಗರದ ಮುಂಡ್ಲೂರು ರಾಮಪ್ಪ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಮಾತನಾಡಿ, ಪರಿಶಿಷ್ಟ ಜಾತಿಯ 101 ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಪ್ರಾತಿನಿಧ್ಯ ಕುರಿತಾದ ಸಮಗ್ರ ಹಾಗೂ ವಸ್ತುನಿಷ್ಠ ಅಂಕಿ-ಅಂಶಗಳ ಕುರಿತಾದ ಕೊರತೆ ಇದ್ದು, ಈ ಬಗ್ಗೆ ವೈಜ್ಞಾನಿಕ ಅಧ್ಯಯನ ಕೈಗೊಳ್ಳದೆ,

ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಏಕಾಏಕಿ ಒಳಮೀಸಲಾತಿ ವರ್ಗೀಕರಣ ಕುರಿತಾಗಿ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಡೆಯನ್ನು ಅಖಿಲ ಕರ್ನಾಟಕ ಕುಳುವ ಮಹಾ ಸಂಘವು ತೀವ್ರವಾಗಿ ಖಂಡಿಸುತ್ತದೆ ಎಂದರು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯಗಳ ನಡುವೆ ಒಳಮೀಸಲಾತಿ ಕಲ್ಪಿಸಲು ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳ ನಡುವಿನ ಮೀಸಲಾತಿ ಹಂಚಿಕೆಯ ಕುರಿತಾದ ಸಮಗ್ರ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯವನ್ನು ಖಾತ್ರಿ ಪಡಿಸಲು ಸಮರ್ಥನೀಯ ಹಾಗೂ ವೈಜ್ಞಾನಿಕ ದತ್ತಾಂಶಗಳನ್ನು ಕ್ರೋಢಿಕರಿಸಿ, ವಿಶ್ಲೇಷಿಸಿ ತಜ್ಞರ ವರದಿಯನ್ನು ಪಡೆದು ಕೊಳ್ಳದ ಹೊರತು ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳದಂತೆ ರಾಜ್ಯದ ದಮನಿತ ಹಾಗೂ ಅವಕಾಶ ವಂಚಿತ ಅಲೆಮಾರಿ,ಕೊರಮ-ಕೊರಚ-ಕೊರವ ಸಮುದಾಯದಗಳ ಪರವಾಗಿ ಅಖಿಲ ಕರ್ನಾಟಕ ಕುಳುವ ಮಹಾ ಸಂಘವು ಈ ಪತ್ರಿಕಾ ಗೋಷ್ಠಿಯ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದು ಅವರು ತಿಳಿಸಿದರು.

ಅಷ್ಟೇ ಅಲ್ಲದೆ ಮುಂಬರುವ ಸಚಿವ ಸಂಪುಟ ಸಭೆಯಲ್ಲಿ, ಸರ್ಕಾರವು ಏಕಾಏಕಿ ಪರಿಶಿಷ್ಟ ಜಾತಿಯ ಒಳಮೀಸಲಾತಿಯ ಕುರಿತಂತೆ ಅಸಮರ್ಥನೀಯ ಹಾಗೂ ಅತಾರ್ಕಿಕ ದತ್ತಾಂಶಗಳನ್ನು ಆಧರಿಸಿ ಯಾವುದೇ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳಬಾರದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇವೆ.

2011ರ ಜನಗಣತಿಯ ಅಂಕಿ ಅಂಶಗಳನ್ನು ಪರಿಗಣಿಸದೇ, ರಾಜ್ಯದಲ್ಲಿ ಇತ್ತೀಚೆಗಿನ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ (ಜಾತಿ ಗಣತಿ -2016/ ಕಾಂತರಾಜು ಆಯೋಗದ ವರದಿ) ಕೂಡಲೇ ಬಹಿರಂಗಗೊಳಿಸಿ ಸದರಿ ವರದಿಯಲ್ಲಿರುವ ದತ್ತಾಂಶಗಳನ್ನು ಪರಿಗಣಿಸಬೇಕು. ಪರಿಶಿಷ್ಟ ಜಾತಿಯ 101 ಸಮುದಾಯಗಳ ಪೈಕಿ 51 ಜಾತಿಗಳು ಗುರುತಿಸಲ್ಪಟ್ಟ ಅಲೆಮಾರಿ ಮತ್ತು ವಿಮುಕ್ತ ಸಮುದಾಯಗಳಾಗಿದ್ದು,

ಇವುಗಳ ಸಾಮಾಜಿಕ ಹಿಂದುಳಿದಿರುವಿಕೆ, ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಮೀಸಲಾತಿ ಪ್ರಾತಿನಿಧ್ಯವನ್ನು ಕುರಿತಾದ ಸಮರ್ಥನೀಯ ದತ್ತಾಂಶಗಳನ್ನು ಕ್ರೋಢಿಕರಿಸಿ ವೈಜ್ಞಾನಿಕ ವಾಗಿ ವಿಶ್ಲೇಷಿಸಲು ಸಾಮಾಜಿಕ ಶೈಕ್ಷಣಿಕ ಮತ್ತು ಕಾನೂನು ಪರಿಣಿತಿ ಯುಳ್ಳ ತಜ್ಞರ ಸಮಿತಿಯನ್ನು ಕೂಡಲೇ ರಚಿಸಬೇಕು, ಅಂತಹ ತಜ್ಞರ ಸಮಿತಿಯ ವರದಿ ಪಡೆದು 101ಜಾತಿಗಳ ಅಹವಾಲುಗಳನ್ನು ಮುಕ್ತವಾಗಿ ಅಲಿಸಿ ಸಮುದಾಯಗಳ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಚಿಂತಕರೊಂದಿಗೆ ಸಮಾಲೋಚನೆ ನಡೆಸಿ, ನಂತರ ಪರಿಶಿಷ್ಟ ಜಾತಿ ಒಳಮೀಸಲಾತಿಯ(ವರ್ಗೀಕರಣ) ತಿರ್ಮಾನ ಕೈಗೊಳ್ಳಬೇಕು ಎಂದು ಅವರು ತಮ್ಮ ಹಕ್ಕುತಾಯಗಳನ್ನು ಸರ್ಕಾರಕ್ಕೆ ಸಲ್ಲಿಸಿದರು.

ಈ ಪತ್ರಿಕೆ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ರಾಜ್ಯ ಖಜಾಂಚಿ ರಮಣಪ್ಪ ಭಜಂತ್ರಿ, ಜಿಲ್ಲಾಧ್ಯಕ್ಷ ಶಂಕರ ಬಂಡೆ ವೆಂಕಟೇಶ್, ಜಿಲ್ಲಾ ಕಾರ್ಯದರ್ಶಿ ಕೆ ಶ್ರೀನಿವಾಸ, ಜಿಲ್ಲಾ ಖಜಂಚಿ ಕೆ ರಂಗಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಕೆ ನಾಗರಾಜ ಸೇರಿದಂತೆ ಹಲವರು ಇದ್ದರು.

## ಬಿಸಿಯೂಟ ತಯಾರಕ ವೇತನ ಬಿಡುಗಡೆ ಮಾಡುವಂತೆ ಸಚಿವರಿಗೆ ಮನವಿ

● ವಾರ್ತಾಲೋಕ ವಾರ್ತೆ

**ದಾವಣಗೆರೆ :ಅ 25 :** ಎಐಟಿಯುಸಿ ಬಿಸಿಯೂಟ ತಯಾರಕರ ಪದಾಧಿಕಾರಿಗಳು,ಶಿಕ್ಷಣ ಮಂತ್ರಿಗಳ ಜೊತೆ ಸಭೆ ಬಿಸಿಯೂಟ ತಯಾರಕರಿಗೆ 3 ತಿಂಗಳ ವೇತನ ಬಿಡುಗಡೆ.

ದಾವಣಗೆರೆ - 23-10-24 ರಂದು ಬೆಂಗಳೂರಿನ ಸಮಗ್ರ ಶಿಕ್ಷಣ ಯೋಜನಾಧಿಕಾರಿಗಳ ಸಭಾಂಗಣದಲ್ಲಿ ರಾಜ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪನವರ ನೇತೃತ್ವದಲ್ಲಿ ಎಐಟಿಯುಸಿ ಬಿಸಿಯೂಟ ತಯಾರಕರ ಮತ್ತು ಮಧ್ಯಾಹ್ನ ಉಪಹಾರ ಯೋಜನೆ ರಾಜ್ಯಮಟ್ಟದ ಅಧಿಕಾರಿಗಳ ಜೊತೆ ಸಭೆ ನಡೆಸಿ ಬಿಸಿಯೂಟ ತಯಾರಕರ ವಿವಿಧ ಸಮಸ್ಯೆಗಳಾದ, ಎಪ್ರಿಲ್ ಮೇ ತಿಂಗಳ ಬರಗಾಲ ಕಾರ್ಯಕ್ರಮದಲ್ಲಿ ಅಡುಗೆ ಮಾಡಿದ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು, ಮತ್ತು ಬಾಕಿ ಇರುವ ಆಗಸ್ಟ್ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ವೇತನವನ್ನು ಬಿಡುಗಡೆ ಮಾಡಬೇಕು ಮತ್ತು ಮರಣ ಪರಿಹಾರ ಜಾರಿಗೊಳಿಸಬೇಕು ನಿವೃತ್ತ ಬಿಸಿಊಟ ತಯಾರಕರಿಗೆ ಘೋಷಣೆಯಾಗಿರುವ ಇಡುಗಂಟು ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಹತ್ತರಿಂದ ಇಪ್ಪತ್ತು ವರ್ಷ ಅಡುಗೆ ತಯಾರಕರಾಗಿ ಕೆಲಸ ನಿರ್ವಹಿಸಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದಾಗ ಬಿಡುಗಡೆಗೊಳಿಸಿದ ಬಿಸಿಯೂಟ ತಯಾರಕರಿಗೂ ಇಡುಗಂಟು ಹಣ ಕೊಡಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಬಿಸಿಯೂಟ ತಯಾರಕರಿಗೆ ಪ್ರತಿ ತಿಂಗಳು ಐದನೇ ತಾರೀಖಿನ ಒಳಗೆ ವೇತನ ಪಾವತಿಸಬೇಕು, ಎಸ್ ಡಿ ಎಂ ಸಿ ಮತ್ತು ಮುಖ್ಯ ಶಿಕ್ಷಕರ ಜಂಟಿ ಖಾತೆ ರದ್ದುಗೊಳಿಸಿ ಮುಖ್ಯ ಶಿಕ್ಷಕರು ಮತ್ತು ಅಡುಗೆಯವರ ಬ್ಯಾಂಕ್ ಜಂಟಿ ಖಾತೆ ಪುನಃ ಮುಂದುವರಿಸಬೇಕೆಂದು ಒತ್ತಾಯಿಸಲಾಯಿತು.



ವಾರಕ್ಕೆ ಎರಡು ದಿನ ಮೊಟ್ಟೆ ಕೊಡುತ್ತಿದ್ದನ್ನು ಈಗ ಆರು ದಿನ ಮೊಟ್ಟೆ ಕೊಡುವುದು ಜಾರಿಗೆ ಬಂದಿದೆ ಆದ್ದರಿಂದ ಮೊಟ್ಟೆ ಸುಲಿಯುವುದಕ್ಕೆ ಈಗ ಇರುವ 30 ಪೈಸೆ ಬದಲಾಗಿ 50 ಪೈಸೆ ಕೊಡಬೇಕು, ಈಗ ಶಾಲೆಯಲ್ಲಿ ಹೆಚ್ಚುವರಿ ಕೆಲಸ ಇರುವುದರಿಂದ ಬಿಸಿಯೂಟ ತಯಾರಕರಿಗೆ ಕನಿಷ್ಠ ವೇತನ ಕೊಡಬೇಕೆಂದು ಒತ್ತಾಯಿಸಲಾಯಿತು.

ಈ ಎಲ್ಲಾ ಬೇಡಿಕೆಗಳನ್ನು ಆಲಿಸಿದ ಶ್ರೀ ಮಧು ಬಂಗಾರಪ್ಪನವರು ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ತಿಳಿಸಿ ವೇತನವನ್ನು ಹೆಚ್ಚುವರಿ ಮಾಡುವುದಕ್ಕೆ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ರಾಜ್ಯಾಧ್ಯಕ್ಷ ಹೊನ್ನಪ್ಪ ಮರೆಮ್ಮನವರ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ, ಆವರಗೆರೆ ಚಂದ್ರು ಮುಖಂಡರುಗಳಾದ ನಿರ್ಮಲ ಮತ್ತು ಶಶಿಕಲ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು. ಶಿಕ್ಷಣ ಇಲಾಖೆ ಪ್ರಿನ್ಸಿಪಲ್ ಸೆಕ್ರೆಟರಿ ರಿತೇಶ್ ಕುಮಾರ್, ಶಿಕ್ಷಣ ಇಲಾಖೆ ಕಮಿಷನರ್ ರವರಾದ ತ್ರಿಲೋಕ ಚಂದ್ರ ಮಧ್ಯಾಹ್ನ ಉಪಹಾರ ಯೋಜನೆ, ನಿರ್ದೇಶಕರಾದ ಕುಮಾರ್ ರಾವ್, ಶ್ರೀ ಮಂಜುನಾಥ್ ಸೇರಿದಂತೆ ಇಲಾಖೆಯ ಇತರೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು ಒಟ್ಟಾರೆ ಸಭೆಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ಎಲ್ಲ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಹಂತ ಹಂತವಾಗಿ ಬಿಸಿಯೂಟ ತಯಾರಕರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಸಭೆ ನಡೆದ ದಿನವೇ ಬಾಕಿ ಇದ್ದ ಮೂರು ತಿಂಗಳ ವೇತನವನ್ನು ಬಿಡುಗಡೆಗೊಳಿಸಿ ಆದೇಶ ಹೊರಡಿಸಿದರು.

ಕಾಂ ಆವರಗೆರೆ ಚಂದ್ರು ಪ್ರಧಾನ ಕಾರ್ಯದರ್ಶಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಮೊ 9341004190

**ವರದಿ ಸುರೇಶ್ ಹಲಗಿ**

## ಹರಿಪ್ರಸಾದ್ ಹೇಳಿಕೆಗೆ ಬ್ರಾಹ್ಮಣ ಸಮಾಜ ಖಂಡನೆ

**ಬಾಗಲಕೋಟೆ :** ಜಾತಿ ಜನಗಣತಿ ವಿಚಾರದಲ್ಲಿ ಗೌರವಯುತವಾಗಿ ತಮ್ಮ ಅಭಿಪ್ರಾಯ ಮಂಡಿಸಿರುವ ಪೇಜಾವರಮಠದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ಕುರಿತು ಲಘುವಾಗಿ ಮಾತನಾಡಿರುವ ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ಕೂಡಲೇ ಬೇಷರತ್ ಕ್ಷಮೆಯಾಚಿಸಬೇಕೆಂದು ಬ್ರಾಹ್ಮಣ ಸಮಾಜ ಆಗ್ರಹಿಸಿದೆ.

ಈ ಕುರಿತು ಜಂಟಿ ಪ್ರಕಟಣೆ ಬಿಡುಗಡೆಗೊಳಿಸಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ಹಾಗೂ ಬ್ರಾಹಣ ತರುಣ ಸಂಘಗಳು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನವಾಗಿ ಮಾತನಾಡಲು ಹಕ್ಕಿದೆ. ಜಾತಿ ಜನಗಣತಿ ವಿಚಾರದಲ್ಲಿ ಶ್ರೀಗಳು ಯಾರನ್ನೂ ಟೀಕಿಸಿಲ್ಲ. ಸಮ ಸಮಾಜ ನಿರ್ಮಾಣವಾಗಬೇಕಾದರೆ ಅಲ್ಲಿ ಜಾತಿಗಳನ್ನು ಇಬ್ಭಾಗ ಮಾಡಿ ವೈಭವೀಕರಿಸಬಾರದು ಎಂಬುದಷ್ಟೇ ಅವರ ಹೇಳಿಕೆಯಾಗಿದೆ. ಆದರೆ ಅವರ ಹೇಳಿಕೆಯನ್ನು ಖಂಡಿಸುವ ಭರದಲ್ಲಿ ಹರಿಪ್ರಸಾದ್ ಅವರು ಶ್ರೀಗಳ ಬಗ್ಗೆ ಲಘುವಾಗಿ ಮಾತನಾಡಿದ್ದು, ಅವರು ಕೂಡಲೇ ಕ್ಷಮೆಯಾಚಿಸದಿದ್ದರೆ ಸಮಾಜ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿವೆ.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com